Karnataka Agricultural Produce Marketing (Regulation) (Amendment) Bill—1975 Introdution

MADAM SPEAKER.— Now Hon'ble Minister to move for leave to introduce the Bill.

SRI S. M. KRISHNA (Minister for Industries and Parliamentary Affairs).— I move:

"That leave be granted to introduce the Karnataka Agricultural Produce Maeketing (Regulations) (Amendment) Bill, 1975"

MADAM SPEAKER.— The question is ;

"That leave be granted to introduce the Karnataka Agricultural Produce Marketing (Regulations) (Amendment) Bill, 1975."

The motion was adopted and the leave granted

SRI S. M. KRISHNA.— I introduce the Karnataka Agricultural Produce Marketing (Regulations) (Amendment) Bill, 1975.'

MADAM SPEAKER.—The Bill is introduced.*

Karnataka Sales Tax Second Amendment Bill 1975
Motion te Cousider Debate Contd

† ಶ್ರೀ ಟಿ, ಆರ್. ಶಾಮಣ್ಣ (ಕೋಟೆ).— ಮಾನ್ಯ ಅಧ್ಯಕ್ಷರೇ, ಜನಗಳ ಮೇಲೆ ಹೆಚ್ಚಿನ ತೆರಿಗೆ ಹಾಕಿ ಅವರ ಹೊರೆಯಂನ್ನು ಇನ್ನಷ್ಟು ಜಾಸ್ತಿ ಮಾಡಬೇಕೆಂದು ಸರಕಾರ ಇಂತಹ ಮಸೂದೆಗಳನ್ನು ತರುತ್ತಿದೆ. ಮಂಖ್ಯವಾಗಿ ಇಲ್ಲಿ ಈಗ ತಂದಿರತಕ್ಕ ಮಸೂದೆಯಲ್ಲಿ ಇರತಕ್ಕ ಹರತ್ತು ಪರ್ಸೆಂಟಿನಷ್ಟು ಸರ್ಚಾರ್ಜನ್ನು ಹಾಕಿರುವುದು ಸರಿಯಲ್ಲ ಎಂದು ಹೇಳುವುದಕ್ಕೆ ನಾನು ಇಲ್ಲಿ ನಾಲ್ಕಾರು ಸಲಹೆಗಳನ್ನು ಸರಕಾರಕ್ಕೆ ಕೊಡಲು ಇಷ್ಟ ಪಡುತ್ತೇನೆ.

Mr Deputy Speaker in the Chair.

ಮೊದಲನೆಯದಾಗಿ ಈ ಶೇ . ೧೨ ಸೇಲ್ಸ್‌ಟ್ಯಾಕ್ಸ್ ಮೇಲೆ ಕೊಡಬೇಕು ಮತ್ತು ಅದನ್ನು ಈ ಕಸ್ಟಮರ್ಸ್ ಮೇಲೆ ಹಾಕಬಾರದು ಎನ್ನುವ ಬಗ್ಗೆ ಒಂದನೆಯದಾಗಿ ಈ ಲೆವಿ ಏನು ಇದೆಯೋ ಅದು ಡಿಸ್ಟ್ರಿಮಿನೇಟರಿ ಮತ್ತು ಈಕ್ವಿಟಿಗೆ ಬಹಳ ದೂರ ಇದೆ ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಮುಖ್ಯವಾಗಿ ಶೇ . ೧೦ ರಷ್ಟು ಸರ್‌ಚಾರ್ಜ್ ಡಿಸ್ಕ್ರಿಮಿನೇಟರಿ ಆಗುತ್ತದೆ ಮತ್ತು ನ್ಯಾಯವಾದುದಲ್ಲ ಎನ್ನತಕ್ಕಂಥದನ್ನು ಆರ್ಥ ಸಚಿವರ ಗಮನಕ್ಕೆ ತರಲಿಷ್ಟಪಡುತ್ತೇನೆ. ಏಕೆಂದರೆ ತೆರಿಗೆಯನ್ನು ಹಾಕತಕ್ಕಂಥದ್ದು ಸೇಲ್ಸ್ ಟ್ಯಾಕ್ಸ್ ಮೇಲೆ ಶೇ . ೧೦ ರಷ್ಟು. ಆದೆದರಿಂದ ಕೆಲವು ವಸ್ತುಗಳಿಗೆ ಸುಮಾರು ಶೇಕಡ ಒಂದೂವರೆ ಅಥವಾ ಎರಡರಷ್ಟು ಸೇಲ್ಸ್ ಟ್ಯಾಕ್ಸ್ ಇರುತ್ತದೆ ಮತ್ತೆ ಕೆಲವಕ್ಕೆ ಶೇಕಡ ೧೫ ಅಥವಾ ೧೬ ರಷ್ಟು ಬರುತ್ತದೆ. ಟರ್ನ್ ಓವರ್ ತೆಗೆದುಕೊಂಡರೆ ಶೇಕಡ ಒಂದೂವರೆಯಷ್ಟು ಸೇಲ್ಸ್ ಟ್ಯಾಕ್ಸ್ ಕೊಡತಕ್ಕದ್ದರ ಮೇಲೆ ೧೦ ಲಕ್ಷ ರೂಪಾಯಿ ಇಟ್ಟುಕೊಂಡರೂ ಕೂಡ ಶೇಕಡ ಒಂದೂವರೆ ಕೊಡತಕ್ಕಂಥವನು ಕೇವಲ ೨೦೦ ರೂಪಾಯಿ ಸರ್‌ಚಾರ್ಜ್ ಕೊಡಬೇಕಾಗುತ್ತದೆ. ಶೇಕಡ ೧೫ ಅಥವಾ ೧೬ ಆದಾಗ ೬೦೦ ರೂಪಾಯಿ ಕೊಡಬೇಕಾಗುತ್ತದೆ. ಟರ್ನ್ ಓವರ್ ಮೇಲೆ ತೆಗೆದು

* Bill appended Annexure to this Volume

ಕೊಳ್ಳುವುದರಿಂದ ಸೇಲ್ಸ್ ಟ್ಯಾಕ್ಸ್ ಸ್ಲಾಬ್ ೨ ರಿಂದ ೧೬ ರ ವರೆಗೆ ಹೋಗುವುದರಿಂದ, ಮತ್ತು ಬಡವರು ಕೊಡಬೇಕಾಗಿರುವುದರಿಂದ. ಈ ಡಿಸ್ಕ್ರಿವಿನೇಟರಿ ನ್ಯಾಯವಾದುದಲ್ಲ. ಈಕ್ವಿಟಿ ಇರಬೇಕು. ೨೫ ಲಕ್ಷ ರೂಪಾಯಿ ಸಾಮಾನು ಮಾರತಕ್ಕವನು ಶೇಕಡ ೨ ರಿಂದ ೧೨ ರ ವರೆಗೆ ಕೊಡತಕ್ಕ ಸಾಮಾನಿನಲ್ಲಿ ೨೫ ಲಕ್ಷ ರೂಪಾಯಿ ಟರ್ನ್ ಓವರ್ ಆದರೆ ಆಗ ಕಡಿಮೆ ದರದಲ್ಲಿ ಸೇಲ್ಸ್ ಟ್ಯಾಕ್ಸ್ ಯಾರು ಕೊಡುತ್ತಾರೋ ಅವರಿಗೆ ಹೆಚ್ಚಿನ ಬಾರ ಬೀಳುವುದಿಲ್ಲ ಹೆಚ್ಚಿಗೆ ಸೇಲ್ಸ್ ಟ್ಯಾಕ್ಸ್ ಕೊಡತಕ್ಕವನ ಮೇಲೆ ಹೆಚ್ಚಿನ ಬಾರ ಬೀಳುತ್ತದೆ ಇದು ಡಿಸ್ಕ್ರಿವಿನೇಷನ್ ಆಗುತ್ತದೆ. ಅದನ್ನು ಯೋಚನೆ ಮಾತ ಬೇಕೆಂದು ಹೇಳುತ್ತೇನೆ. ಟರ್ನ್ ಓವರ್ ಎಂದು ಹೇಳಿದರೆ ಟೊಟಲ್ ಸೇಲ್ಸ್ ಆಗುತ್ತದೆ ಟೋಟಲ್ ಸೇಲ್ಸ್‌ನಲ್ಲಿ ನಾವು ಸಾಧಾರಣವಾಗಿ ಸೆಕ್ಷನ್ ೬ ರ ಪ್ರಕಾರ ಕೆಲವು ಎಕ್ಸ್‌ಪೆಂಡಿಚರ್ಸ್, ಲೆವಿಟ್‌ಮೆಂಟ್ ಪೈಟ್ ಡ್ಯೂಟಿ ಇಂಥದ್ದಕ್ಕೆ, ಡಿಡಕ್ಷನ್ ಕೊಡಬೇಕು. ಗ್ರಾಸ್ ಟರ್ನ್ ಓವರ್ ಮೇಲೆ ದಂಡ್ಲು ಕತ್ತು ಕೊಳ್ಳಬೇಕೆಂದು ಏನು ಹೇಳುತ್ತೀರಿ ಅದು ನ್ಯಾಯವಾದುದಲ್ಲ. ಮೂರನೆಯದಾಗಿ ಇನ್‌ಕಂ ಟ್ಯಾಕ್ಸ್‌ನಲ್ಲಿ ಯಾವ ರೀತಿ ಮಾರ್ಜಿನಲ್ ಕೇಸಸ್‌ನಲ್ಲಿ ರಿಲೀಫ್ ಕೊಡುತ್ತಾರೋ ಅದೇ ರೀತಿ ಇಡಿಯೂ ರಿಲೀಫ್ ಕೊಡುವ ಅವಶ್ಯಕತೆ ಇರುತ್ತದೆ ಒಬ್ಬ ಸುಮಾರು ೬ ಸಾವಿರ ಚಿಲ್ಲರೆ ಏನಾದರೂ ಇನ್‌ಕಂ ಟ್ಯಾಕ್ಸ್ ಇದ್ದರೆ ಕೊಡುವುದಿಲ್ಲ ಇನ್‌ಕಂ ಟ್ಯಾಕ್ಸ್‌ನಲ್ಲಿರುವ ಹಾಗೆ ಇಲ್ಲಿಯೂ ಮಾರ್ಜಿನಲ್ ರಿಲೀಫ್ ಕೊಡಬೇಕಾಗುತ್ತದೆ. Either he pays the tax or he should get some relief provided in the income tax Act. ಮಾರ್ಜಿನಲ್ ರಿಲೀಫ್ ಪ್ರೊವೈಡ್ ಮಾಡುವುದು ಅವಶ್ಯಕವಾದುದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತು ಇದರಲ್ಲಿ ಶೇಕಡ ೧೦ ರಷ್ಟು ಟ್ಯಾಕ್ಸ್ ಹಾಕಿರತಕ್ಕಂಥದ್ದು ಸ್ವಲ್ಪ ನ್ಯಾಯವಾದುದಲ್ಲ ಎಂದು ಕಾಣಿಸುತ್ತದೆ. ಪಕ್ಕೆಂದರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ ಇದರಿಂದ ಬೇಕಾದಷ್ಟು ಅಕ್ರಮಗಳು ಶುರುವಾಗುತ್ತವೆ ೧೦ ಲಕ್ಷ ರೂಗಳು ಎನ್ನುವುದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಒಂದು ಕಡೆ ೨—೩ ಬೋರ್ಡ್ ಹಾಕಿ ಆ ಬೋರ್ಡುಗಳಲ್ಲಿ ಮಗನ ಹೆಸರಿನಲ್ಲಿ ಒಂದು, ಅವನ ಹೆಸರಿನಲ್ಲಿ ಒಂದು ಹೀಗೆ ಬೇರೆ ಬೇರೆಯವರ ಹೆಸರಿನಲ್ಲಿ ವ್ಯಾಪಾರ ಮಾಡಿ ಟರ್ನ್ ಓವರ್ ಸ್ಪ್ಲಿಟ್ ಮಾಡಿ ಕೆಲವು ಕಡೆ ವಸೂಲ್ಮಾಡುವುದಕ್ಕೆ ಆಗದಹಾಗೆ ಕಣ್ಣಿಗೆ ಮಣ್ಣೆರಚುವ ಪ್ರಸಂಗ ಬರುತ್ತದೆ. ಆ ರೀತಿ ಅವ್ಯವಹಾರ ಮಾಡುವುದಕ್ಕೆ ಹೆಚ್ಚು ಅವಕಾಶಗಳಿವೆ ಎಂದು ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಕೊಟ್ಟಾಗತಹ ಟ್ಯಾಕ್ಸ್ ಇನ್‌ಕಂ ಟ್ಯಾಕ್ಸ್‌ನಲ್ಲಿ ಡಿಡಕ್ಷನ್ ಕೊಡುತ್ತಾರೋ ಇಲ್ಲವೋ ಎಂದು ಸಂದೇಹ ಏಕೆಂದರೆ ಇನ್‌ಕಂ ಟ್ಯಾಕ್ಸ್ ಪ್ರಾಫಿಟ್ ಮೇಲೆ ಹಾಕತಕ್ಕಂಥದ್ದು. ಇದು ಪ್ರಾಫಿಟ್ ಅರ್ನ್ ಮಾಡದೆ ಕೊಡತಕ್ಕಂಥದ್ದು. ಇಂಥದರಲ್ಲಿ ಇದು ಡಬಲ್ ಟ್ಯಾಕ್ಸ್ ಹಾಕಿದ ಹಾಗಾಗುತ್ತದೆ. ಅದರ ಬಗ್ಗೆ ಸ್ವಲ್ಪ ವಿವರ ಕೊಡಬೇಕಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಅನೇಕರು ಬಾರೋಡ್ ಕ್ಯಾಪಿಟಲ್‌ನಿಂದ ಬಿಸಿನೆಸ್ ಮಾಡುವಾಗ ಸಾಧಾರಣವಾಗಿ ಬ್ಯಾಂಕ್‌ಗಳಲ್ಲಿ ಶೇಕಡ ೧೫, ೨೦, ೧೦ ಬಡ್ಡಿ ಹಾಕುತ್ತಾರೆ. ಇಂಥ ಸಂದರ್ಭದಲ್ಲಿ ಸ್ವಲ್ಪ ಕಷ್ಟತರವಾದ ಪ್ರಶ್ನೆ ಬರುತ್ತದೆ. ಇದರ ಜೊತೆಗೆ ಪವರ್ ಕಟ್‌ನಿಂದ ಅನೇಕ ಕಡೆ ಲಾಭ ಬರುವುದು ಕಡಿಮೆ ಆಗುವ ಪ್ರಶ್ನೆ ಬರುತ್ತಿದೆ ಹೀಗಿರತಕ್ಕ ಪರಿಸ್ಥಿತಿಯಲ್ಲಿ ಎಷ್ಟು ನ್ಯಾಯವಾಗಿ ಉಳಿಯಬೇಕಾಗಿತ್ತೋ ಅಂಥದ್ದು ಉಳಿಯುವುದು ಕಷ್ಟವಾಗಿದೆ ಈ ಪ್ರಿಮಿಯರ್ ಆಟೋಮೊಬೈಲ್ಸ್ ಕನ್ಸರ್ನ್ ಕೇಳಿದರೆ ಅವರಿಗೆ ಸುಮಾರು ೫—೬ ಕೋಟಿ ರೂ. ಟರ್ನ್ ಓವರ್ ಇದೆ ಎಂದು ಹೇಳುತ್ತಾರೆ. ಅವರು ಲೆಕ್ಕವನ್ನು ಕ್ರಮವಾಗಿ ಇಡಬೇಕಾಗುತ್ತದೆ. ಅವರು ರೆಪ್ಯೂಟೆಡ್ ಫಾರಮ್ಸ್ ಆಗಿರುವುದರ ಹೆಚ್ಚಿಗೆ ಕುಂಬಕೋಣ ಮಾಡುವುದಕ್ಕೆ ಆಗುವುದಿಲ್ಲ. ಆನೆಕ ಸಂದರ್ಭದಲ್ಲಿ ಹೆಚ್ಚು ಟರ್ನ್ ಓವರ್ ಮಾಡುವವರು ಅನೇಕ ರೀತಿಯಲ್ಲಿ ಟ್ಯಾಕ್ಸು ಕೊಡದೆ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಇದೆ ಆದ್ದರಿಂದ ಆಗತಕ್ಕ ಅನ್ಯಾಯ ಬಹಳ ಜಾಸ್ತಿಯಾಗಿರುತ್ತದೆ. ಎಲ್ಲಕ್ಕಿಂತ ವೆನ್ನೆ ತಿಳಿಸಿದ ಹಾಗೆ ಕನ್ಸ್ಯೂಮರ್ಸ್ ಮೇಲೆ ಟ್ಯಾಕ್ಸನ್ನು ಪಾಸ್ ಆನ್ ಮಾಡುವುದಕ್ಕೂ ಆಗುವುದಿಲ್ಲ ಎಂದು ಹೇಳಿದರೂ ಕೂಡ ವ್ಯಾಪಾರಸ್ಥನು ಸೇಲ್ ಪ್ರೈಜ್ ಫಿಕ್ಸ್ ಮಾಡುವಾಗ ಟ್ಯಾಕ್ಸ್ ಸೇರಿಸಿಕೊಂಡು ಫಿಕ್ಸ್ ಮಾಡುತ್ತಾನೆ. ಅದನ್ನು ತಡೆಗಟ್ಟುವುದಕ್ಕೆ ಯೋಚನೆ ಮಾಡಬೇಕಾದ ಅವಶ್ಯಕತೆ ಈ ಸಂದರ್ಭದಲ್ಲಿ ಇದೆ. ಆದ ದರಿಂದ ಲೆವಿ ಹಾಕಿರತಕ್ಕಂಥದ್ದು ಸರಿಯಾದ ರೀತಿಯಲ್ಲಿ ಯೋಚನೆ ಮಾಡಿಲ್ಲ ಮತ್ತು ಇದರಲ್ಲಿ ಟ್ರೇಡ್ ಡೈವರ್ಟ್ ಆಗುವ ಪರಿಸ್ಥಿತಿಯೂ ಬರಬಹುದು, ಮತ್ತು ಹೆಚ್ಚಿನ ಒಂದು ಅಕ್ರಮ ವ್ಯವಹಾರ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದು ಹಾಕತಕ್ಕಂಥದ್ದು ಸರಿಯಾದುದಲ್ಲ ಎನ್ನತಕ್ಕಂಥದ್ದನ್ನು ನಾನು ಸ್ಪಷ್ಟ ಪಡಿಸಬೇಕಾಗುತ್ತದೆ. ಒಂದು ಸಮಯ ಪ್ರಾಫಿಟ್ ಬಂದರೆ ಶೇಕಡ ೧೦ ರಷ್ಟು ಟ್ಯಾಕ್ಸ್ ಕೊಡುವುದು ಸರಿ. ಆದರೆ ಅನೇಕ ಸಂದರ್ಭಗಳಲ್ಲಿ ಲಾಸ್ ಆಗಿರಬಹುದು. ಲಾಸ್ ಆದ ಪಕ್ಷದಲ್ಲಿ ಟರ್ನ್ ಓವರ್‌ನಲ್ಲಿ ಕೊಡಬೇಕಾದರೆ ಅವನು ಯಾವರೀತಿ ಕೊಡಬೆಕು ಎಂದು ಆಲೋಚನೆ ಮಾಡಿ ಟರ್ನ್ ಓವರ್ ಲೆಕ್ಕಕ್ಕೆ ತೆಗೆದುಕೊಂಡ ಪಕ್ಷದಲ್ಲಿ ಎಲ್ಲಾ ವ್ಯಾಪಾರದಲ್ಲಿಯೂ ಲಾಭ ಬರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಲಾಸ್ ಆದರೆ ಕ್ಯಾಪಿಟಲ್‌ನಿಂದ ಎತ್ತಿಕೊಡಬೇಕೇ ಹೊರತು ಲಾಭದಿಂದ ಕೊಡುವುದಕ್ಕೆ

ಆಗುವುದಿಲ್ಲ. ಈ ಸಂದರ್ಭದಲ್ಲಿ ಏನು ಮಾಡಬೇಕು ಎನ್ನುವ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಮತ್ತು ನಿತ್ಯಬಳಕೆಯ ಆಹಾರ ವಸ್ತುಗಳ ಮೇಲೆ ನ್ಯಾಯವಾಗಿ ತೆರಿಗೆ ಹಾಕಬಾರದು ಅವರ ಮೇಲೆ ಹಾಕಿರುವುದು ಶೋಚನೀಯವಾದ ವಿಚಾರ ಈಗಾಲೆ ಆಹಾರ ವಸ್ತುಗಳ ಮೇಲೆ ಬೆಲೆ ಬಹಳ ಆಗಿರುವಾಗ ತೆರಿಗೆ ಅವರ ಮೇಲೆ ಹಾಕುವುದು ತಪ್ಪುಗುತ್ತದೆ ಲಕ್ಸುರಿ ಗೂಡ್ಸ್, ಚಿನ್ನ ಬೆಳ್ಳಿ ವ್ಯಾಪಾರದ ಮೇಲೆ ಎಷ್ಟು ಬೇಕಾದರೂ ಹಾಕಿ ಕೆಲವು ರಾಜ್ಯಗಳಲ್ಲಿ ನಿತ್ಯಬಳಕೆಯ ಆಹಾರ ವಸ್ತುಗಳ ಮೇಲೆ ಹಾಕುತ್ತಾ ಇಲ್ಲ ಮತ್ತು ಕೆಲವು ಕಡೆ ಹಾಕಿದರೂ ಬಹಳ ಕಡಿಮೆ ಡ್ಯಾಕ್ಸ್ ಹಾಕಿದ್ದಾರೆ. ಅದನ್ನು ತೆಗೆದುಹಾಕುವ ಸಂಕಲ್ಪ ಮಾಡಿ ಅದನ್ನು ಮಲ್ಟಿ ಪಾಯಿಂಟ್ ಮೇಲೆ ಹಾಕುವುದು ಶೋಚನೀಯವಾದ ವಿಚಾರ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗ ಪೊನ್ನೆ ಪಾನ್ಸ ಮಂತ್ರಿಗಳು ಹೇಳಿದಾಗ ಕೆಲವು ತೆರಿಗೆಗಳನ್ನು ಸಾಕಾದಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ ಎಂದು ಕೇಳಿದ್ದಾರೆ. ಈಗ ಇದರಿಂದ ನನಗೆ ತಿಳಿಯುವುದು ಇಷ್ಟೇ, ಇತ್ತೀಚೆಗೆ ಯಾರು ಪ್ರಭಾವ ಬೀರಿದ್ದಾರೆ ಆಕಾಶಕ್ಕೆ ಏಣಿ ಇಟ್ಟಿದೆ ಎಂದು ಹೇಳುತ್ತೇನೆ ಮತ್ತೆ ಇನ್ನು ಕೆಲವನ್ನು ಇಕ್ಕಟ್ಟಿಗೆ ಸಿಕ್ಕಿಕೊಂಡು ಮಾಡಿದ್ದಾರೆ ಎಂದು ಬತ್ತಿ ಹೇಳಬೇಕಾಗಿದೆ. ಈಗ ಬೆಂಗಳೂರಿನಿಂದ ಬೇಕಾದಷ್ಟು ರೆಡಿಮೇಡ್ ಗಾರ್ಮೆಂಟ್ಸ್ ಅಮೆರಿಕಕ್ಕೆ ರಫ್ತು ಆಗುತ್ತಾ ಇದೆ. ಅಲ್ಲಲ್ಲೇ ಈಗ ಇಲ್ಲಿ ಅಮೆರಿನ್ ನಾರ್ಟಿಲ್ಟೆಸ್ ಫರ್ಮ್ ಎಂದು ಇದೆ, ಇಲ್ಲಿಂದ ಆ ರೆಡಿಮೇಡ್ ಗಾರ್ಮೆಂಟ್ಸ್ ತೆಗೆದುಕೊಂಡು ಹೋಗುತ್ತಾರೆ ಈಗ ರೆಡಿಮೇಡ್ ಗಾರ್ಮೆಂಟ್ಸ್‌ಗೆ ಸ್ವಲ್ಪ ರಿಲೀಫ್ ಕೊಟ್ಟಿದ್ದಾರೆ. ಈ ರೀತಿ ಹೊರಗಡೆ ಹೋಗುತ್ತಾ ಇರುವ ರೆಡಿಮೇಡ್ ಗಾರ್ಮೆಂಟ್ಸ್ ಜಾಸ್ತಿಯಾಗಿದೆ. ಮತ್ತೆ ಈ ಬಡವರು ಉಪಯೋಗಿಸುತಕ್ಕ ಗಾರ್ಮೆಂಟ್ಸ್ ಮೇಲೆ ಇರುವ ತೆರಿಗೆಯನ್ನು ತೆಗೆದುಹಾಕಿದ್ದರೆ ಬಹಳ ಜೆನ್ನಾಗಿ ಇತ್ತು ಅಲ್ಲದೇ ಅರೇಂಟ್ಸ್ ಮೇಲೆ ರಿಲೀಫ್ ಕೊಟ್ಟಿದ್ದಾರೆ, ಈಗ ಬಡವರು ಉಡಿಕೆ, ಎಲೆ, ಹ ಕತಕ್ಕನವರು ಇದ್ದಾರೆ, ಅಲ್ಲದೇ ಪಾನ್ಸ ರಾಜ್ಯಪಾಲರ ದ ಮೋಪನ್‌ಲಾಲ್ ಸುಖಾಡಿಯ ರವರು ಕೂಡ ಪಾನ್ ಬೀಡ ಹಾಕುತ್ತಿರುತ್ತಾರೆ ಸಣ್ಣ ಬಡವರು ಕೂಡ ಇದನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ, ಆದುದರಿಂದ ಇದರ ಮೇಲೆ ಇರುವಕ್ಕ ತೆರಿಗೆಯನ್ನು ತೆಗೆದುಹಾಕಬೇಕು ಎಂದು ಹೇಳುತ್ತೇನೆ. ಮತ್ತೆ ಪೆಪ್ಪರ್, ಕಾಷ್ಯೂ, ಇಂತಹವುಗಳ ಮೇಲೆ ತೆರಿಗೆ ಹಾಕಿರುವುದು ಸರಿಯಲ್ಲ. ಬಿಂದು ಬಡ ರೈತರಿಗೆ ಸಹಾಯ ಮಾಡುತ್ತೇವೆ ಎಂದು ಹೇಳುವುದು ದುಡ್ಡೊಂದು ಕಡೆ ಕ್ರಿಮಿನಾಲಕಕ್ಕೆ ಉಪಯೋಗಿಸಕ್ಕ ಇನ್‌ಸೆಕ್ಟಿಸೈಡ್ಸ್ ಡಸ್ಟರ್ ಮೇಲೆ ತೆರಿಗೆ ಹಾಕುವುದು ಸರಿಯೇ ಎಂದು ಯೋಚನೆ ಮಾಡಬೇಕು. ಈಗ ಕ್ಯಾಷ್ಯೂ ನಟ್ ನಮ್ಮ ರಾಜ್ಯದಿಂದ ಹೊರಗಡೆ ಹೋಗುತ್ತಿದೆ. ಇಂತಹ ಸಾಮಾನುಗಳ ಮೇಲೆ ತೆರಿಗೆ ಹಾಕುತ್ತಾ ಬಂದರೆ ವ್ಯಾಪಾರಸ್ಥರಿಗೆ ಧಕ್ಕೆ ಬರುತ್ತದೆ, ಆದುದರಿಂದ ಅದನ್ನ ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಮಾರ್ಬಲ್ ಚಿಪ್ಸ್ ಮೇಲೆ ತೆರಿಗೆ ಹಾಕಿದ್ದೀರಿ, ಅದನ್ನು ಹೇಳುವುದಕ್ಕೆ ಹೋದರೆ ಇದರ ತೆರಿಗೆಯನ್ನು ಸಾವುಕಾರರು ಕೊಡುತ್ತಾರೆ ಬಿಡಿ ಎಂದು ಹೇಳಿಬಿಡುತ್ತೀರಿ. ಆದರೆ ಮಾರ್ಬಲ್ ಚಿಪ್ಸ್ ಹಾಕಿ ಕಟ್ಟಿರಕ್ಕಂಥ, ದೊಡ್ಡ ದೊಡ್ಡ ಸಾಹುಕಾರರ ಮನೆಗಳು, ಮಂತ್ರಿಗಳ ಮನೆಗಳು, ಇವೆಲ್ಲವೂ ಬಡವರು ಕೊಟ್ಟಿರತಕ್ಕ ದುಡ್ಡಿನಿಂದ ಕಟ್ಟಿರತಕ್ಕದ್ದ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗ ಮಂತ್ರಿಗಳ ಮನೆ ಮಾರ್ಬಲ್ ಚಿಪ್ಸ್ ಹಾಕಿ ಬೇಕಾದಷ್ಟು ಫರ್ನಿಷ್ ಮಾಡಿ ಕಟ್ಟಿಸಿರುತ್ತಾರೆ, ಅದು ಎಲ್ಲಾ ಬಡವರು ಕೊಟ್ಟ ತೆರಿಗೆ ಹಣ ಎಂದು ಹೇಳಿಬೇಕಾಗಿದೆ ಮಹಾತ್ಮ ಗಾಂಧಿಯವರು ಮಂತ್ರಿಗಳ ಸಂಬಳ ಐದು ನೂರು ರೂಪಾಯಿ ಇರಬೇಕು ಎಂದು ಹೇಳಿದರು, ತಾವು ಹೆಚ್ಚಿನ ಸೌಕರ್ಯ ಪಡೆಯುವುದಕ್ಕೆ ಹೋದರೆ ಅದರ ಹೊರೆಯಲ್ಲಾ ಆಗುಕೂಲ ಇಲ್ಲದ ಬಡವರ ಮೇಲೆ ಬೀಳತ್ತದೆ. ಅದುದರಿಂದ ಯಾವ ತೆರಿಗೆ ಹಾಕಬೇಕಾದರೂ ಬಡವರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಬೇಕು ಎಂದು ಹೇಳುತ್ತೇನೆ ಈಗ ಭವ್ಯವಾದ ಮನೆಗಳನ್ನು ಕಟ್ಟುವುದಕ್ಕೆ ಹೋದರೆ ಅವರ ಹೊರೆಯೆಲ್ಲಾ ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಇದರ ಜೊತೆಗೆ ಇನ್ಕಿ ಸಿಂಗಲ್ ಪಾಯಿಂಟ್ ಮೇಲೆ ಮಾತಿದ್ದೇವೆ ಎಂದು ಹೇಳಿದಿರಿ. ಇನ್ಕಿ ಕೆಟ್ಟಿರತಕ್ಕ ಎಲ್ಲಾ ಆರ್ಟಿಕಲ್ಸ್ ಎಲ್ಲಾ ಸಾಧಾರಣವಾಗಿ ಸಿಂಗಲ್ ಪಾಯಿಂಟ್ ಮೇಲೆ ಸಾಲ್ಕೆದು ಪಾಯಿಂಟ್ ದಾಟುವ ಹಾಗಿದ್ದೀರಿ. ಇದರಿಂದ ಹೋಲ್ ಸೇಲರ್ ನೇರವಾಗಿ ತೆಗೆದುಕೊಳ್ಳುವ ಪದಾರ್ಥಗಳ ಮೇಲೆ ಬರುವುದಿಲ್ಲ. ಇದರಿಂದ ಜಿಲ್ಲೆಗೆ ಮಾರಾಟ ಮಾಡುವ ಹೊತ್ತಿಗೆ ಕನುಕೂಲ ಸಿಕ್ಕುವುದಿಲ್ಲ. ಈಗ ಆಸಾಫಲ್ಟ್ ನೇರವಾಗಿ ಮದ್ರಾಸ್‌ನಿಂದ ತೆಗೆದುಕೊಳ್ಳುತ್ತಾರೆ ಟರ್ನ್ ಓವರ್ ಇಲ್ಲ, ಟ್ಯಾಕ್ಸ್ ಮಾತ್ರ ಲೆ ಪರ್ಸೆಂಟ್ ಆಗಿದೆ ಈಗ ಫುಡ್ ಆರ್ಟಿಕಲ್ಸ್ ಬಗ್ಗೆ ಹೇಳುವುದಾದರೆ ಪ್ರೊಡ್ಯೂಸರ್ ಒಂದು ಸಾರಿ ಟ್ಯಾಕ್ಸ್ ಕೊಡಬೇಕಾಗತ್ತದೆ, ನಂತರ ಹೋಲ್ ಸೇಲರ್ ಒಂದು ಸಾರಿ ಟ್ಯಾಕ್ಸ್ ಕೊಡಬೇಕಾಗುತ್ತದೆ, ಮತ್ತು ರೀಟೇಲರ್ ಒಂದ ಸಾರಿ ಟ್ಯಾಕ್ಸ್ ಕೊಡಬೇಕಾಗುತ್ತದೆ. ಈ ರೀತಿ ಒಂದು ಎರಡು ಕ್ಕೆ ಬದಲಾಯಿಸುವ ಸಾಮಾನುಗಳ ಮೇಲೆ ತೆರಿಗೆ ಹಾಕಿ ಕಣ್ಣಿರಿಸುವ ನೀತಿ ನೋಡಿದರೆ ಅಷ್ಟು ಜೆನ್ನಾಗಿ ತೋಚುವುದಿಲ್ಲ ಎಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಹಾಗೆ ಅವಶ್ಯಕತೆ ಬಂದಾಗ ಮಾತನಾಡುತ್ತೇನೆ. ಈಗ ಕಾಲಾವಕಾಶವನ್ನು ಪುನಃ ರಿಪೀಟ್ ಮಾಡಿ ವೇಸ್ಟ್

ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಈಗ ನಾವು ತಿಳಿಸುವುದು ಏನು ಎಂದರೆ I urge upon the Finance Minister to see that additional taxes are not levied now and then. Let there be efficiency in the collection of taxes and then only the Government can do something good to the people. Levying more and more taxes will do harm to the people than good. ದಯವಿಟ್ಟು ಇಂತಹ ತಪ್ಪು ಕೆಲಸಗಳನ್ನು ಮಾಡುವುದು ಸರಿಯಲ್ಲ ಎಂದು ಹೇಳಿ. ಈಗ ಹೆಚ್ಚಿರುವ ತೆರಿಗೆಗಳನ್ನು ವಾಪಸ್ಸು ತೆಗೆದ ಕೊಳ್ಳಬೇಕು ಎಂದು ಹೇಳಿ, ಇಷ್ಟು ಕಾಲ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ ಕಕಿಲಾಯ (ಬಂಟವಾಳ್) —ಸನ್ಮಾನ್ಯ ಉಪಾಧ್ಯಕ್ಷರೆ, ಈ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಗ್ಗೆ ಕೆಲವು ಸಲಹೆಗಳನ್ನು ಕೊಡಬೇಕು ಎಂದು ಇದ್ದೇನೆ. ಮೊದಲನೆಯದಾಗಿ ಹೇಳುವುದಾದರೆ ಆಹಾರ ಪದಾರ್ಥಗಳ ಮೇಲೆ ತೆರಿಗೆ ಜಾಸ್ತಿ ಮಾಡುವುದಕ್ಕೆ, ನಲ್ಲಿ ಪ್ರಯತ್ನ ಪಟ್ಟಿದ್ದೀರಿ, ಇದನ್ನು ಕೈಬಿಡಬೇಕು ಎಂದು ನನ್ನ ಮೊದಲನೆಯ ಪ್ರಾರ್ಥನೆ. ಎರಡನೆಯದಾಗಿ ಹೇಳುವುದಾದರೆ ಕೊನೆಯ ಪಕ್ಷ ತಾವು ರೇಷನಿಂಗ್ ರೀತಿಯಲ್ಲಿ ಅಂದರೆ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಆಹಾರ ಪದಾರ್ಥಗಳನ್ನು ಒದಗಿಸಿದ್ದೀರಿ, ಈಗ ಹಳ್ಳಿಗಳಲ್ಲಿ, ನಗರಗಳಲ್ಲಿ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಪ್ರಕಾರ ತಾವು ಬಡ ಜನರಿಗೆ ನಿರ್ದಿಷ್ಟವಾದ ದರದಲ್ಲಿ ಆಹಾರ ಧಾನ್ಯಗಳ ಪೂರೈಕೆ ಮಾಡುತ್ತೀರಿ, ಆದರೆ ಅಲ್ಲಿ ಕೂಡ ಬಡ ಜನರು ಈ ಸೇಲ್ಸ್ ಟ್ಯಾಕ್ಸ್ ಕೊಡಬೇಕಾಗುತ್ತದೆ ಆದುದರಿಂದ ಅಂತಹ ಕಡೆಗಳಲ್ಲಿ ಬಡ ಜನರು ಕೊಡುತ್ತಾ ಇರತಕ್ಕ ಸೇಲ್ಸ್ ಟ್ಯಾಕ್ಸ್‌ನ್ನು ಎಕ್ಸಮ್ಪ್ಟ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅಂತಹವರಿಗೆ ಈ ಸೇಲ್ಸ್ ಟ್ಯಾಕ್ಸ್ ಬೀಳದ ಹಾಗೆ ಇರಬೇಕು ಎಂದು ನನ್ನ ಅಭಿಪ್ರಾಯ. ಮತ್ತೆ ಎರಡನೆಯದಾಗಿ ಹೇಳುವುದಾದರೆ ಲೆವಿ ಆಫ್ ಅಡಿಷನಲ್ ಟ್ಯಾಕ್ಸ್ ಎಂದು ಕೇಳಿದ್ದೀರಿ, ಈ ತೆರಿಗೆಯನ್ನು ಪುನರ್ ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ಈಗ ೧೦ ಲಕ್ಷ ರೂಪಾಯಿಗಿಂತ ಹೆಚ್ಚಿನ ಟರ್ನ್ ಓವರ್ ಮಾಡಕ್ಕೆ ವ್ಯಾಪಾರಸ್ಥರು ಏನು ಮಾತಾಡುತ್ತಾರೆ ಎಂದರೆ ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಹೋಲ್ ಸೇಲರ್ಸ್ ರೀಟೇಲರ್ಸ್ ಮೇಲೆ ತೆರಿಗೆ ಹಾಕಿ ತ್ತಾರೆ ನಂತರ ರೀಟೇಲರ್ ವ್ಯಾಪಾರಸ್ಥರ ಮೇಲೆ ತೆರಿಗೆ ಹಾಕುತ್ತಾರೆ ನಂತರ ಯಾರು ವಸ್ತುಗಳನ್ನು ಕೊಂಡು ಕೊಳ್ಳುತ್ತಾರೆ ಅವರ ಮೇಲೆ ಈ ತೆರಿಗೆ ಬೀಳುತ್ತದೆ. ಈಗ ವಸ್ತುಗಳನ್ನು ಕೊಂಡುಕೊಳ್ಳುವವರ ಮೇಲೆ ತೆರಿಗೆ ಬೀಳಬಾರದು ಎಂದು ಇವರಲ್ಲಿ ಪ್ರಾರ್ಥಿಸಿ ಮಾಡಿದ್ದೀರಿ, ಅಷ್ಟು ಮಾಡಿದರೂ ಕೂಡ ಟ್ಯಾಕ್ಸ್ ಎಂದು ಅವರ ಮೇಲೆ ಬಾರ ಬೀಳುವುದಿಲ್ಲ ಅದು ಬೇರೆ ರೀತಿಯಲ್ಲಿ ಅವರಿಗೆ ತೆರಿಗೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಆದುದರಿಂದ ಈ ಸೇಲ್ಸ್ ಟ್ಯಾಕ್ಸ್ ವ್ಯವಸ್ಥೆಯೊಳಗೆ ಇದನ್ನು ತೆರೆದುಕೊಂಡು ಬಾರದು ನೇರವಾಗಿ ಗ್ರಾಹಕರ ಮೇಲೆ ತೆರಿಗೆ ಹೊರಿಸುವುದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಹೇಳುತ್ತೇನೆ. ಈಗ ಏನಾಗುತ್ತದೆ ಎಂದರೆ ವ್ಯಾಪಾರಸ್ಥರು ಟರ್ನ್ ಓವರ್ ಮಾಡುವಾಗ ಒಂದು ಕೈಯಿಂದ ಇನ್ನೊಂದು ಕೈಗೆ ಬರಬೇಕಾದರೆ ಅದರಲ್ಲಿ ಹೆಚ್ಚು ರೇಟ್ ಆಗಿರುತ್ತದೆ, ಈ ಭಾಗ ಅದರ ತೆರಿಗೆ ಯೆಲ್ಲ ಗ್ರಾಹಕರ ಮೇಲೆ ಬೀಳುತ್ತದೆಯೇ ಹೊರತು ವ್ಯಾಪಾರಸ್ಥರು ಯಾರು ಅವರ ಕೈಯಿಂದ ಕೊಡುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಅಲ್ಲದೇ ಗ್ರಾಹಕರ ಮೇಲೆ ತೆರಿಗೆ ಬೀಳದಂತೆ, ವ್ಯಾಪಾರಸ್ಥರ ಕೈಯಿಂದ ತೆರಿಗೆ ವಸೂಲು ಮಾಡುವುದಕ್ಕೆ ಬೇರೆ ಒಂದು ವ್ಯವಸ್ಥೆ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನೂ ಕೆಲವು ಐಟಂಸ್‌ಗಳು ಏನು ಕೊಟ್ಟಿದ್ದೀರಿ ಅದರ ಬಗ್ಗೆ ಒಂದೆರಡು ವಿಚಾರ ಮಾತ್ರ ಹೇಳುತ್ತೇನೆ. ರೆಡಿಮೇಡ್ ಗಾರ್‌ಮೆಂಟ್ಸ್ ಬೆಳ್ಳಿದ್ದೀರಿ, ಬಹಳ ಬೇರೆ ಬೇರೆ ವಸ್ತುಗಳಿಗೆ ರಿಯಾಯಿತಿ ಕೊಟ್ಟಿದ್ದೀರಿ ಎಗ್ಜೆಂಟ್ ಮಾಡಿದ್ದೀರಿ. ರೆಡಿಮೇಡ್ ಗಾರ್ಮೆಂಟ್ಸ್ ಉಪಯೋಗ ಮಾಡತಕ್ಕಂಥವರು ಬಡ ಜನ ಎಷ್ಟೋ ಕಡೆ ಸಂತೆಗಳಲ್ಲಿ ರೆಡಿಮೇಡ್ ಗಾರ್ಮೆಂಟ್ಸ್ ಮಾರಾಟ ಮಾಡುತ್ತಾರೆ. ಆ ಬಟ್ಟೆಯನ್ನು ನಿಜವಾಗಿಯೂ ಬಡ ಜನತೆ ಕೊಡುಕೊಳ್ಳತಕ್ಕಂಥವನ್ನು ಬೇರೆ ಅಂಗಡಿಗಳಲ್ಲಿ ಸಿಗುವುದಕ್ಕಿಂತ ಕಡಿಮೆ ಬೆಲೆಗೆ ರೆಡಿಮೇಡ್ ಗಾರ್ಮೆಂಟ್ಸ್ ಸಿಗುತ್ತದೆ ಆದರಲ್ಲಿಯೂ ಕೂಡ ಬೇರೆ ರೀತಿಯಲ್ಲಿ ಹಳ್ಳಿ ಜನತೆಗೆ ಮೋಸ ಮಾಡುತ್ತಾರೆ. ಹಳೇ ಬಟ್ಟೆಗಳನ್ನು ಉಪಯೋಗಿಸಿ, ಕಟ್ ಪೀಸ್‌ಗಳನ್ನು ಉಪಯೋಗಿಸಿ ರೆಡಿಮೇಡ್ ಗಾರ್ಮೆಂಟ್ ತಯಾರುಮಾಡಿ ಅದನ್ನು ಮಾರಾಟ ಮಾಡುತ್ತಾರೆ. ಆದರೆ ಮೇಲೆ ಟ್ಯಾಕ್ಸ್ ಬಿದ್ದರೆ ಬಡ ಜನತೆಗೆ ಪ್ಲಾಂಟೇಷನ್‌ನಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ, ಹಳ್ಳಿಯ ಜನರು ಇದಕ್ಕೆ ಹೆಚ್ಚಿ ಹಣವನ್ನು ತೆರಬೇಕಾಗುತ್ತದೆ. ಆ ದೃಷ್ಟಿಯಿಂದ ರೆಡಿಮೇಡ್ ಗಾರ್ಮೆಂಟ್ಸ್‌ಗೆ ಇದರ ವ್ಯಾಪ್ತಿಯಿಂದ ವಿನಾಯಿತಿ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಫ್ಲಾಷಬಲ್ ಗಾರ್ಮೆಂಟ್ಸ್‌ಗೆ ಟ್ಯಾಕ್ಸ್ ಹಾಕಿ, ಬಡ ಜನತೆ ಉಪಯೋಗಿಸುವ ರೆಡಿಮೇಡ್ ಗಾರ್ಮೆಂಟ್ಸ್‌ಗೆ ಇದರಿಂದ ವಿನಾಯಿತಿ ಕೊಡಬೇಕು.

2-30 P.M.

ಡೆಸ್ಟಾರ್ಸ್, ಪೆಸ್ಟಿಸೈಡ್ಸ್ ಇದರ ಬಗ್ಗೆ ತಂ ದ್ದೀರಿ. ಈಗಾಗಲೇ ಇದರ ಬೆಲೆ ಬಹಳ ವಿಪರೀತ ವಾಗಿದೆ. ಡೆಸ್ಟರ್ಸ್, ಪ್ಯೂಯಾರ್ಸ್ ಮತ್ತು ಪೆಸ್ಟಿಸೈಡ್ಸ್ ಉತ್ಪಾದನೆ ಮಾಡುವಂಥ ಕಂಪನಿಗೆ- ಸಬ್ಸಿಡಿ ಕೊಡುತ್ತಿದ್ದರು. ಈಗ ಅದಕ್ಕೆ ಮಾರ್ಗ ಇಲ್ಲದ ಕಾಲದಲ್ಲಿ, ರೈತರಿಗೆ ಸಬ್ಸಿಡಿ ಕೊಟ್ಟು ಮಾರ್ಕೆಟಿಗೆ ಅನುಕೂಲ ಮಾಡಿಕೊಡಬೇಕು. ಈಗ ಸಬ್ಸಿಡಿ ಇಲ್ಲ. ರೈತರಿಗೆ ಏನೂ ಸಹಾಯ ಸಿಗುತ್ತಾ ಇಲ್ಲ. ಅವರು ಸಾಲ ತೆಗೆದುಕೊಂಡ ಪಡೆಯಬೇಕಾಗುತ್ತದೆ, ಅದಕ್ಕೆ ಬಡ್ಡಿ ಎಷ್ಟಾಗುತ್ತದೆ ಎನ್ನುವುದು ತಪ್ಪಗೆ ಗೊತ್ತಿದೆ. ಕೋಪರೆ ಟಿವ್ ಸೊಸೈಟಿಯವರು ೧೧—೧೨ ಪರ್ಸೆಂಟ್ ಬ್ಯಾಂಕುಗಳವರು ೧೪—೧೫ ಪರ್ಸೆಂಟ್ ತೆಗೆದುಕೊಳ್ಳುತ್ತಾರೆ ವ್ಯವಸಾಯಕ್ಕೆ ಹೆಚ್ಚಿಗೆ ಗಮನ ಕೊಡಬೇಕು ಆಧುನಿಕ ಉಪಕರಣ ಗಳನ್ನು ಉಪಯೋಗ ಮಾಡುವಂಥ ಈ ಕಾಲದಲ್ಲಿ, ಇವುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದರೆ ಸಾಮಾನ್ಯ ಜನರಿಗೆ ಬಹಳ ಕಷ್ಟವಾಗುತ್ತದೆ. ಶ್ರೀಮಂತರು ಉಪಯೋಗಿಸಲಿಕ್ಕೆ ಸಾಧ್ಯವಾಗುತ್ತದೆ, ಅವರು ಉಪಯೋಗಿಸುತ್ತಾರೆ, ಸಾಮಾನ್ಯ ರೈತರು, ಗೇಣಿದಾರರು ಒಡ ರೈತರು ಉಪಯೋಗ ಮಾಡುವುದಿಲ್ಲ. ಹಾಗಿರುವಾಗ ಉತ್ಪಾದನೆಯಲ್ಲಿ ಬರುವಂತೆ ವರಮಾನ ಇನ್ನೂ ಮುಂದಕ್ಕೆ ಜಾಸ್ತಿ ಯಾಗುತ್ತದೆ. ಇವತ್ತು ಒಂದು ರೀತಿಯ ಘರ್ಷಣೆ ಬೆಳೆಯುತ್ತಿದೆ, ನಮ್ಮಲ್ಲಿರತಕ್ಕ ಒಡ ರೈತರಿಗೆ ಡ್ಯಾರ್ಸ್, ಪ್ಯುಯಾರ್ಸ್ ದೊರೆಯುವ ಅವಕಾಶ ಮಾಡಿಕೊಡಬೇಕು ಇವನ್ನು ಕೂಡ ಸೇಲ್ಸ್ ಟ್ಯಾಕ್ಸ್ ವ್ಯಾಪ್ತಿಯಿಂದ ಹೊರತುಪಡಿಸಬೇಕೆಂದು ನನ್ನ ಅರಿಕೆ. ಲಿನೋಲಿಯಂ ಬಗ್ಗೆ ಹೇಳಬೇಕಾದರೆ, ಇದು ಪೂರ್ತಿಯಾಗಿ ಹೊರಗಡೆ ಹೋಗುವಂಥ ವಸ್ತು ಭೂಸುಧಾರಣಾ ಶಾಸನ ತಯಾರು ಮಾಡಿದಂಥ ಕಾಲದಲ್ಲಿ ಲಿನೋಲಿಯಂ ಒಂದೆರಡು ಕ್ಷೇತ್ರಗಳಿಗೆ ಇರುವುದಿದ್ದು ಇದಕ್ಕೆ ವಿನಾಯಿತಿ ಕೊಟ್ಟಿದ್ದೀರಿ. ಇದರಲ್ಲೂ ಕೂಡ ೧೦—೧೨ ಪರ್ಸೆಂಟ್ ಮಾತಿದ್ದೀರಿ ಇದಕ್ಕೆ ಬೇಕಾದರೆ ಜಾಸ್ತಿ ಮಾಡಿ. ಇದರಲ್ಲಿ ನಷ್ಟ ಬರುವುದಿಲ್ಲ. ೧೫ ಪರ್ಸೆಂಟ್ ಜಾಸ್ತಿ ಮಾಡಲಿಕ್ಕೆ ಆಗುತ್ತದೆ ಕಡಿಮೆ ಮಾಡುವುದಕ್ಕೆ ಕಡಿಮೆ ಮಾಡಬೇಕು, ವಿನಾಯಿತಿ ಕೊಡಬೇಕಾದುದಕ್ಕೆ ವಿನಾಯಿತಿ ಕೊಡಬೇಕು.

ಸ್ಪೆಕ್ಟಿಕಲ್ಸ್, ಗ್ಲಾಸ್, ಲೆನ್ಸ್ ಮತ್ತು ಫ್ರೇಮ್ಸ್ ಮೇಲೆ ಬೇರೆ ಹಾಕಿದ್ದೀರಿ. ಲೆಕ್ಕ ಬರೆಯುವಾಗ ನಿಂಬೆಹಣ್ಣು ಸೋಸ್ಕರೆ ಮತ್ತು ನೀರಿಗೆ ಬೇರೆ ಬೇರೆ ಬರೆಯಂ ಜನರಿಗೆ ಮೋಸ ಮಾಡುವ ವ್ಯವಹಾರ ಹಳ್ಳಿ ಗಳಲ್ಲಿ ನಡೆಯುತ್ತಿದೆ ಸ್ಪೆಕ್ಟಿಕೆಡ್ಸ್, ಫ್ರೇಮ್ಸ್ ಇಷ್ಟೆಲ್ಲಾ ರೀತಿಯಲ್ಲಿ ತಾವು ಹಾಕಿದರೆ ನನ್ನಂತಹವನಂ ಟ್ಯಾಕ್ಸ್ ಕೊಡುವುದು ಬಹಳ ಕಷ್ಟವಾಗುತ್ತದೆ. ಸನ್ ಗ್ಲಾಸಸ್‌ಗೆ ಹಾಕಿ. ಸ್ಪೆಕ್ಟಿಕಲ್ಸ್‌ನ್ನು ಅನಿವಾರ್ಯ ವಾಗಿ ಉಪಯೋಗ ಮಾಡಲೇಬೇಕಾಗುತ್ತದೆ ಆದುದರಿಂದ ಈ ವಸ್ತುವಿನ ಜೊತೆಗೆ ಲೆನ್ಸ್, ಫ್ರೇಮ್ಸ್‌ಗೂ ಸೇಲ್ಸ್ ಟ್ಯಾಕ್ಸ್ ಕೆತ್ತ ಹಾಕಬೇಕು ಗ್ಲಾಸ್, ಸನ್‌ಗ್ಲಾಸ್ ಅವುಗಳ ಮೇಲೆ ತಾವು ಹಾಕಿ ಅನಿವಾರ್ಯವಾಗಿ ಉಪಯೋಗ ಮಾಡಲೇಬೇಕಾದ ವಸ್ತುಗಳ ಮೇಲೆ ಹಾಕಬಾರದು ಎಂದು ನನ್ನ ವಿನಂತಿ ಇವುಗಳ ಬಗ್ಗೆ ತಾವು ಯೋಚನೆ ಮಾಡಿ ಸಾಕಷ್ಟು ವಿನಾಯಿತಿ ಕೊಡುತ್ತೀರೆಂದು ನಂಬುತ್ತೇನೆ. ಇದರಿಂದ ಸರ್ಕಾರಕ್ಕೆ ಬರುವಂಥ ವರಮಾನ ಕಡಿಮೆಯಾಗುವುದಿಲ್ಲ ಈಗಾಗಲೇ ಎಷ್ಟೋ ಹಣ ಬಿಟ್ಟು ಬಿಟ್ಟಿದೀರಿ, ಇದರಿಂದ ಹೆಚ್ಚಿನ ಕಷ್ಟವಾಗುವುದಿಲ್ಲ, ಜನರಿಗೆ ಬಹಳ ಸಹಾಯ ಮಾತಿದಂತಾಗುತ್ತದೆ, ಅವರು ತಮಗೆ ಕೃತಜ್ಞರೂ ಕೂಡ ಆಗಿರುತ್ತಾರೆ. ಇನ್ನು ಬೈಕ್ ದ್ವಿಚಕ್ರ ವಾಹನ ಮೇಲೆ ಹಾಕಿದ್ದೀರಿ, ಆಟೋಮೊಬೈಲ್ಸ್ ಮತ್ತು ಪೆಟ್ರೋಲ್ ಹಾಗೂ ಬಿಡಿಭಾಗಗಳ ಬೆಲೆ ಜಾಸ್ತಿಯಾಗಿದೆ. ಬೈಕ್ಸ್ ಆದರೂ ಸರಿಯಾಗಿರಲಿ, ಬ್ರೇಕ್ಸ್ ಸರಿಯಾಗಿಲ್ಲದೇ ಹೋದರೆ, ಅಪಾಯಗಳು, ಅಪಘಾತಗಳು ಜಾಸ್ತಿ ಯಾಗುವ ಸಂಭವ ಇರುತ್ತದೆ. ತಾವು ತುಮಕೂರಿಗೆ ಹೋಗುವ ದಾರಿಯಲ್ಲಿ ಹೋದರೆ ಗೊತ್ತಾಗುತ್ತದೆ, ಬಾಯಿಬಿದ್ದಕ್ಕೂ ಲಾರಿಗಳು ಆಲ್ಲಲ್ಲೇ ಕೆಟ್ಟು ಹೋಗಿ ಅಪಘಾತಗಳು ಆಗಿ ನಿಂತಿರುವುದನ್ನು ನಾವು ನೋಡುತ್ತೇವೆ ಸಮಾಜದಲ್ಲಿ ಜನರ ರಕ್ಷಣೆ ಇರುವಂಥ ವಸ್ತುಗಳು ಇವುಗಳನ್ನು ಸೇರಿಸಕೂಡದೆಂದು ಪಾರ್ಥಿಸಿಕೊಳ್ಳುತ್ತೇನೆ.

† ಎ. ನಂಜಪ್ಪ (ಅರಸೀಕೆರೆ).—ಮಾನ್ಯ ಅಧ್ಯಕ್ಷರೇ, ಮಾರಾಟ ತೆರಿಗೆ ಕಾನೂನು ಪ್ರಥಮತ: ನಮ್ಮ ರಾಜ್ಯದಲ್ಲಿ ೧೯೫೪ನೇ ಇಸವಿಯಲ್ಲಿ ಬಂತು. ಆಗ ಇದನ್ನು ಪರಿಚಯ ಮಾಡಬೇಕಾದರೆ ಸರ್ಕಾರ ದವರು ಒಂದು ವರ್ಷ ಹೇಳಿದರು. ಮಧ್ಯಪಾನ ನಿರೋಧವನ್ನು ಜಾರಿಗೆ ತರುವುದಾದ ಆರ್ಥಕ್ಕಂಥ ನಷ್ಟವನ್ನು ಭರ್ತಿಮಾಡುವುದಕೋಸ್ಕರ ಈ ಮಾರಾಟತೆರಿಗೆಯನ್ನು ತರುತ್ತಿದ್ದೇವೆಂದು ಹೇಳಿದರು. ನಿಜ ವಾಗಿಯೂ ಕೂಡ ಅದು ಒಂದು ಒಳ್ಳೆಯದು ಮಧ್ಯಪಾನ ಜಾರಿಗೆ ತರುವುದರಿಂದ ಬಹಳ ಜನಕ್ಕೆ ಒಳ್ಳೆಯ ದಾಗ ತ್ತದೆ ಎನ್ನುವಕ್ಕ ಭಾವನೆಯಿಂದ ಈ ಮಾರಾಟತೆರಿಗೆಯನ್ನು ವಿಧಿಯಿಲ್ಲದೇ ಇನ್ನೂರೂ ಇರೆಯನ್ನು ಒಪ್ಪಿಕೊಂಡದ್ದಾಯಿತು ೧೯೫೪ರಲ್ಲಿ ಜಾರಿಗೆ ಬಂದಂತ ಮಾರಾಟತೆರಿಗೆಯಲ್ಲಿಂದ ಇನ್ನೂ ಸರಿಗೆ ಅನೇಕ ಸಂದರ್ಭದಲ್ಲಿ ತಿದ್ದುಪಡಿ ತರುವುದರ ಮುಖಾಂತರ ಮಾರಾಟ ತೆರಿಗೆಯನ್ನು ಬಹಳಮಟ್ಟಿಗೆ ಹೆಚ್ಚಿಸುವು ದರಿಂದ ತೆರಿಗೆ ಬಹಳ ಆಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ, ಕರ್ನಾಟಕ ರಾಜ್ಯವನ್ನು ತೆರಿಗೆಯ

ರಾಜ್ಯವೆಂದು ಕರೆಯಬೇಕಾಗುತ್ತದೆ. ಇನ್ನೂ ನಮ್ಮ ರಾಜ್ಯದಲ್ಲಿ ಜನಜೀವನವಮಟ್ಟವನ್ನು ಇವಕ್ಕಿಂತ ಬಹಳ ಕೀಳಮಟ್ಟದಲ್ಲಿ ಇಡುವುದರ ಮೂಲಕ ನಾವೆಲ್ಲ ಸಾರ್ವಜನಿಕರಿಗೆ ಹಿಂಸೆಯಾಗುತ್ತದೆ. ಆದರಲ್ಲಿ ಕೂಡ ಆಹಾರಪದಾರ್ಥಗಳಿಗೆ ಮಾರಾಟತೆರಿಗೆಯನ್ನು ಜಾರಿಗೆ ತರುವುದರ ಮುಖಾಂತರ ಎಷ್ಟೋ ತೊಂದರೆಯಾಗಿ ಜನರು ಈ ದಿವಸ ಉಪವಾಸ ಸಾಯುತಿದ್ದಾರೆ. ಈಗಾಗಲೇ ಅನೇಕ ಸಂದರ್ಭಗಳಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇವೆ ಹೀಗಿದ್ದ ಕೂಡ ಇಷ್ಟಕ್ಕೆ ನಿಲ್ಲದೇ, ಶಿವ್ಮೊಪತಿ ತರುವುದರ ಮುಖಾಂತರ ಹೆಚ್ಚು ಹೆಚ್ಚು ತೆರಿಗೆ ಹಾಕುವುದಕ್ಕೆ ಈಗ ಸಭೆಯಮುಂದೆ ಇಟ್ಟಿದ್ದಾರೆ. ಇವುಗಳಲ್ಲಿ ಬಹಳ ಮುಖ್ಯವಾದ ಅಂಶಗಳು ಎಂದರೆ, ಡಸ್ಟರ್ಸ್ ಮತ್ತು ಸ್ಪೇಯರ್ಸ್ ಜಾಸ್ತಿ ಮಾಡಿದ್ದಾರೆ. ಡಸ್ಟರ್ಸ್ ಉಪಯೋಗಿಸತಕ್ಕ ವರು ಯಾರು ಎಂಬುದನ್ನು ವಿವೇಚನೆಯಿಂದ ಕೂಡ ಸರ್ಕಾರ ಮಾಡಿಲ್ಲ ಎಂದು ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಡಸ್ಟರ್ಸ್ ಉಪಯೋಗಿಸತಕ್ಕವರು ವ್ಯವಸಾಯಗಾರರು ರೈತರು ಗ್ರಾಮಾಂತರಪ್ರದೇಶದಲ್ಲಿ ಒಂದು ಕಡೆ ಹೆಚ್ಚು ಗೊಬ್ಬರ ಹಾಕಿ, ಕ್ರಿಮಿಕೀಟಕಗಳನ್ನು ಔಷದಿಗಳನ್ನು ಉಪಯೋಗಿಸಿ ಹೆಚ್ಚು ಆಹಾರಪದಾರ್ಥಗಳನ್ನು ಬೆಳೆಯಿರಿ ಎನ್ನುವ ಘೋಷಣೆ, ಒಂದು ಕಡೆ ಹೆಚ್ಚು ತೆರಿಗೆ ಹಾಕುವುದರ ಮುಖಾಂತರ ಬೆಳೆ ಕಡಿಮೆ ಆಗುವ ವ್ಯವಸ್ಥೆಯನ್ನು ಮಾಡುತ್ತಾ ಇದ್ದಾರೆ ಇದು ವಿರೋಧಾಭಾಸವಾಗುತ್ತದೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಡಸ್ಟರ್ಸ್‌ಗೆ ಸ್ಪೇಯರ್ಸ್ ಹಾಕಿರತಕ್ಕೆ ಹೆಚ್ಚಳವರಿ ತೆರಿಗೆಯನ್ನು ಕೈಬಿಡಬೇಕಾಗುತ್ತದೆ ಇದರಿಂದ ವ್ಯವಸಾಯಗಾರರಿಗೆ, ರೈತರಿಗೆ ತೊಂದರೆಯಾಗುತ್ತದೆ ಆಹಾರ ಪದಾರ್ಥಗಳ ಉತ್ಪಾದನೆ ಕುಂಠಿತವಾಗುತ್ತದೆಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕಾಲಂ ನಂಬರ್ ೬ರಲ್ಲಿ ಅಡಿಕೆಗೆ ೨ ಪರ್ಸೆಂಟ್ ಟ್ಯಾಕ್ಸ್ ಇತ್ತು, ಆವೇಲೆ ೩ಪರ್ಸೆಂಟ್ ಆಯಿತು. ಈಗ ೪ಪರ್ಸೆಂಟ್ ಮಾಡುವುದಕ್ಕೆ ಒಂದು ಸಲಹೆಯನ್ನು ಇಟ್ಟಿದ್ದಾರೆ ಕಳೆದ ೨-೩ ವರ್ಷಗಳಿಂದ ಅಡಿಕೆ ಧಾರಣೆ ಕಡಿಮೆಯಾದುದರಿಂದ ಅಡಿಕೆ ಬೆಳೆಗಾರರ ಸ್ಥಿತಿ ಹದಗೆಟ್ಟಿದೆ, ಅಡಿಕೆ ಬೆಳೆಗಾರರು ಅನೇಕ ಅಡಿಕೆ ತೋಟಗಳನ್ನು ಗದ್ದೆಯಾಗಿ ಕನ್ವರ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಡಿಕೆ ಬೇಸಾಯಕ್ಕೆ ಖರ್ಚು ಜಾಸ್ತಿಯಾಗಿ ಆದಾಯ ಬಹಳ ಕಡಿಮೆಯಾದುದರಿಂದ ಅಡಿಕೆ ತೋಟಗಳನ್ನು ಮೇಂಟೈನ್ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಅಡಿಕೆ ತೋಟಗಳನ್ನು ಗದ್ದೆಗಳನ್ನಾಗಿ ಪರಿವರ್ತನೆ ಮಾಡತಕ್ಕ ಪ್ರಯತ್ನ ನಡೆಯುತ್ತಾ ಇದೆ ಇಂಥಾಸಂದರ್ಭದಲ್ಲಿ ಹೆಚ್ಚು ತೆರಿಗೆಯನ್ನು ಹಾಕುವುದರಿಂದ ಅವರಿಗೆ ತೊಂದರೆ ಯಾಗುತ್ತದೆ. ಸರ್ಕಾರದವರು ತೆರಿಗೆ ಬೆಳೆಗಾರರ ಮೇಲೆ ಹೇಳುವುದಿಲ್ಲ ವ್ಯಾಪಾರಸ್ಥರ ಮೇಲೆ ಬೀಳುತ್ತದೆ ಎಂದು ಹೇಳುಬಹುದು. ಆದರೆ ಯಾವುದಾದರೂ ತೆರಿಗೆಯನ್ನು ಹಾಕಿದರೆ ಅದು ಬೆಳೆಯುವವರ ಮೇಲೆ ಮತ್ತು ಬಳಸುವವರ ಮೇಲೆ ಬೀಳುತ್ತದೆಯೋ ಹೊರತು ವ್ಯಾಪಾರಸ್ಥರ ಮೇಲೆ ಬೀಳುವುದಿಲ್ಲ, ಆದುದರಿಂದ ಅಡಿಕೆ ಬೆಳೆಗಾರರ ಮೇಲೆ ಈಗ ಹಾಕಬೇಕೆಂದು ಇರುವ ತೆರಿಗೆಯನ್ನು ಕೈಬಿಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆಮೇಲೆ ಕೈಮಗ್ಗ ಮತ್ತು ಉಡುಪುಗಳನ್ನು ತಯಾರು ಮಾಡುವುದರ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಇದು ನಿಜವಾಗಿಯೂ ಬಹಳ ಅನ್ಯಾಯ. ಸುಖೀರಾಜ್ಯದಲ್ಲಿ ಅನ್ನವಸತಿ ಮತ್ತು ಮತ್ತು ಬಟ್ಟೆಯನ್ನು ಒದಗಿಸುವುದು ಸರ್ಕಾರದ ಕರ್ತವ್ಯ ಎಂದು ನಾವು ಹೇಳುತ್ತೇವೆ ಇವುಗಳ ಮೇಲೆ ತೆರಿಗೆಗಳನ್ನು ಹಾಕುವುದರ ಮುಖಾಂತರ ಅವುಗಳನ್ನು ಬಳಸುವವರ ಶಕ್ತಿ ಕಡಿಮೆಯಾಗುತ್ತದೆ. ಇವುಗಳ ಮೇಲೆ ತೆರಿಗೆಯನ್ನು ಹಾಕುವುದು ನಿಜವಾಗಿಯೂ ಒಳ್ಳೆಯದಲ್ಲ, ಅದನ್ನು ಕೈಬಿಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ಸೇಲ್ಸ್ ಟ್ಯಾಕ್ಸ್ ಕಾನೂನು ಏನು ಇದೆ ಅದು ಸಾಮಾನ್ಯ ವರ್ತಕರಿಗೆ, ಗ್ರಾಹಕರಿಗೆ ಅರ್ಥವಾಗತಕ್ಕ ರೀತಿಯಲ್ಲಿ ಇಲ್ಲ. ಮಾರಾಟ ತೆರಿಗೆ ಆಫೀಸಿನಲ್ಲಿ ಟರ್ನ್ ಓವರ್ ೩-೪ ಫಾರ್ಮ್ಸ್ ಇಲ್ಲ. ಪ್ರತಿ ವರ್ಷ ವರ್ತಕರು ಕೊಡಬೇಕಾದಂಥ ಡಿಕ್ಲರೇಷನ್ ಫಾರ್ಮ್ ಇಲ್ಲ ಫಾರ್ಮ್ಸ್ ೩-೪ ಏನಿವೆ ಟರ್ನ ಓವರ್, ರಿಜಿಸ್ಟ್ರೇಷನ್ ಫಾರ್ಮ್ಸ್ ಕರ್ನಾಟಕ ರಾಜ್ಯದಲ್ಲಿ ಯಾವ ಆಫೀಸಿನಲ್ಲೂ ಸಿಗುತ್ತಾ ಇಲ್ಲ. ಫಾರಂ ಕೇಳಿದರೆ ನೀವೇ ಪ್ರಿಂಟ್ ಮಾಡಿಸಿಕೊಂಡು ತಾದು ಭರ್ತಿ ಮಾಡಿಕೊಳ್ಳಿ ಎಂದು ಆಫೀಸರ್ಸ್ ಹೇಳುತ್ತಾರೆ; ಇದು ಒಳ್ಳೆಯದಲ್ಲ. ನಮ್ಮ ರಾಜ್ಯದಲ್ಲಿ ಬರತಕ್ಕ ತೆರಿಗೆಗಳಲ್ಲಿ ೯೦ ಭಾಗ ಮಾರಾಟ ತೆರಿಗೆಯಿಂದ ಸರ್ಕಾರದ ಬೊಕ್ಕಸ ತುಂಬುತ್ತಾ ಇರುವಾಗ, ಇಂತಹ ತೆರಿಗೆಗಳನ್ನು ವಸೂಲು ಆಗುವುದಕ್ಕೆ ಕೊನೆಯ ಪಕ್ಷ ಫಾರಂಗಳನ್ನು ಒದಗಿಸುವುದಕ್ಕೆ ಆಗದೇ ಹೋದರೆ ಇದರಿಂದ ಡೀಲರ್ಸ್‌ಗೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ಯೋಚಿಸಿಪಾಡಿ ಸಂಬಂಧಪಟ್ಟ ಫಾರಂಗ್ಸ್ ಮತ್ತು ಇತರೆ ಸಾಹಿತ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮಾರಾಟ ತೆರಿಗೆ ರೂಲ್ಸನ್ನು ಕನ್ನಡದಲ್ಲಿ ಮಾಡಬೇಕು. ವ್ಯವಸಾಯ ಇನ್‌ಕಂ ಟ್ಯಾಕ್ಸ್ ರೂಲ್ಸನ್ನು ಕನ್ನಡದಲ್ಲಿ ಮಾಡಬೇಕು ಎಂದು ಹಿಂದೆ ಹೇಳಿದ್ದೆ ನಮ್ಮ ಜನಗಳನ್ನು ತೊಂದರೆಗೆ ಸಿಕ್ಕಿಸಬೇಡಿ, ಅವರಂ ಲಾಯರ್ಸ್ ಮತ್ತು ವಿದ್ಯಾವಂತರ ಹತ್ತಿರ ಹೋಗಿ ಫೀಸ್ ಕೊಟ್ಟು ಫಾರಮ್ಸ್‌ನ್ನು ಭರ್ತಿಮಾಡಿಕೊಳ್ಳ

ತಕ್ಕ ಪುವೆಂಯ ಬರಬಾರದು ಎಂದೂ ಹೇಳಿದ್ದೆ. ಈಗಾಗಲೇ ಆಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ರೂಲ್ಸನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಫಾರಂಗಳನ್ನು ಕನ್ನಡದಲ್ಲಿ ಇರುವ ಹಾಗೆ ವ್ಯವಸ್ಥೆ ಮಾಡುತ್ತಿದ್ದಾರೆ. ಆದುದರಿಂದ ಹೊಸದಾಗಿ ತೆರಿಗೆಯನ್ನು ಹಾಕುವುದಕ್ಕೆ ಹೋಗದೆ. ಇರುವ ತೆರಿಗೆಯನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡದೆ, ಬಡವನ ಕಷ್ಟದ ಬಗ್ಗೆ ಯೋಚನೆ ಮಾಡತಕ್ಕಂಥ ಶಕ್ತಿಯನ್ನು ದೇವರು ನಿಮಗೆ ಕೊಡಲಿ ಎಂದು ಪ್ರಾರ್ಥನೆಮಾಡಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಈ ದಿನ ಸೇಲ್ಸ್ ಟ್ಯಾಕ್ಸ್ ಆಕ್ಟ್‌ಗೆ ಸಂಬಂಧಪಟ್ಟ ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಹಿಂದಿರುವ ಡೈರಕ್ಟ್ ಮತ್ತು ಇನ್‌ಡೈರಕ್ಟ್ ಟ್ಯಾಕ್ಸ್ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳಬೇಕಾದುದು ಇಲ್ಲ. ಏಕೆಂದರೆ, ಅನೇಕ ಜನ ಸದಸ್ಯರು ಇದರ ಬಗ್ಗೆ ಹೇಳಿದ್ದಾರೆ. ಆದರೂ ಸಹ ನಾವು ಕೊಟ್ಟಂಥ ಸಲಹೆಗಳನ್ನು ನೇರವಾಗಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸರ್ಕಾರ ಗಮನಿಸುತ್ತಾ ಇಲ್ಲ, ಗಮನಿಸದೆ ಅವರ ಜಾಡಿನಲ್ಲೇ ನಡೆದು ಬಂದಿರತಕ್ಕ ಪರಿಸ್ಥಿತಿ ಇದೆ ಎಂದು ಈ ಒಂದು ತಿದ್ದುಪಡಿ ಮಸೂದೆಯನ್ನು ನೋಡಿದರೆ ಗೊತ್ತಾಗುತ್ತದೆ ಸರ್ಕಾರದವರು ಯಾವ ದಾರಿಯಲ್ಲಿ ಹೋಗುತ್ತಿದ್ದಾರೋ ಅದು ಸರಿಯಾದ ದಾರಿಯಲ್ಲ. ಪ್ರತ್ಯಕ್ಷವಾಗಿ ತೆರಿಗೆಗಳನ್ನು ಹೆಚ್ಚುಮಾಡಿ ಪರೋಕ್ಷವಾಗಿ ಜನರಿಂದ ಕೊಡಬೇಡುವ ತೆರಿಗೆಗಳನ್ನು ಕಡಿಮೆ ಮಾಡಬೇಕು ಎಂದು ಮೊಟ್ಟಮೊದಲನೆಯದಾಗಿ ಸೂಚನೆ ಮಾಡುತ್ತೇನೆ. ಮುಖ್ಯವಾಗಿ ಅನೇಕ ವಿಷಯಗಳನ್ನು ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಅದರ ವಿಷಯವಾಗಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಮುಖ್ಯವಾದ ವಿಷಯವೆಂದರೆ ನಮ್ಮ ರಾಜ್ಯದಲ್ಲಿ ಪ್ರಬಲವಾದ ಸಿಲ್ಕ್ ಲಾಬಿ ಇದೆ. ಅವರನ್ನು ಕಂಡರೆ ಸರ್ಕಾರ್‌ಕ್ಕೆ ಏಕೆ ಬೆವರಿಕೆಯೋ ಹೆದರಿಕೆಯೋ ನನಗೆ ಅರ್ಥವಾಗುತ್ತಿಲ್ಲ. ಸಿಲ್ಕ್ ಯಾರ್ನ್ ಮೇಲೆ ಶೇಕಡ ೨ ಪರ್ಸೆಂಟ್ ತೆರಿಗೆ ಇತ್ತು, ಅದು ತಗೆದರು. ಅದನ್ನು ತೆಗೆಯುವ ಸಂದರ್ಭದಲ್ಲಿ ಸರ್ಕಾರದ ಮೇಲೆ ಗುರುತರವಾದಂಥ ಅಪಾದನೆಗಳನ್ನು ಈ ಕಡೆಯ ಸದಸ್ಯರು ಮಾಡಿದ್ದು ಉಂಟು ಅದರ ಪುನರುಚ್ಚಾರರನ್ನು ನಾವು ಮಾಡಿದ್ದು ಉಂಟು. ಆದರೆ ಆದರ ಬಗ್ಗೆ ಇಲ್ಲಿಯವರೆಗೆ ವಿಚಾರಣೆ ನಡೆಸುವುದಾಗಲಿ, ಸಿಲ್ಕ್ ಮಾರ್ಕೆಟಿನಲ್ಲಿ ವಸೂಲು ಮಾಡುವ ಹಣ ಯಾರಿಗೆ ಸೇರಿದ್ದು ಎನ್ನುವುದರ ಬಗ್ಗೆ ಆಗಲೀ ಸರ್ಕಾರ ಧೈರ್ಯವಾಗಿ ಹೇಳಿಕೆಯನ್ನು ಕೊಡಲಿಕ್ಕೆ ತಯಾರಿಲ್ಲ. ಮೊದಲು ಕೈಮಗ್ಗದಲ್ಲಿ ತಯಾರಾದ್ದಂಥ ಬಟ್ಟೆ ಮೇಲೆ ತೆರಿಗೆ ಹಾಕುವುದಿಲ್ಲ ಎಂದು ಹೇಳಿದರು. ಆದಾದ ಮೇಲೆ ಕೈಮಗ್ಗದಲ್ಲಿ ತಯಾರಾದ ಬಟ್ಟೆಗೂ ಪವರ್ ಲೂಮ್‌ನಲ್ಲಿ ತಯಾರಾದ ಬಟ್ಟೆಗೂ ವ್ಯತ್ಯಾಸ ಮಾಡಿದ್ದು ಸೂಕ್ತವಾದುದಲ್ಲ. ಟ್ಯಾಕ್ಸನ್ನು ಹಾಕುವಾಗಲೇ ಗೊಂದಲವಾಗುತ್ತದೆ ಎನ್ನುವ ದೃಷ್ಟಿಯಿಂದ ರೇಷ್ಮೆ ಬಟ್ಟೆ ಮೇಲೆ ಸುಂಕವನ್ನು ತೆಗದು ಹಾಕಿದ್ದಾರೆ. ಇದಕ್ಕೆ ಏನು ಕಾರಣ ಎಂದು ಅರ್ಥವಾಗುತ್ತಾ ಇಲ್ಲ ಏಕೆಂದರೆ ರೇಷ್ಮೆ ಬಟ್ಟೆ, ಸೀರೆ, ಪರಟು ಜುಬ್ಬಗಳನ್ನು ಹಾಕತಕ್ಕವರು ನಾವಲ್ಲ, ಸಾಮಾನ್ಯ ಜನ ಹಾಕುವುದಿಲ್ಲ ಒಂದೊಂದು ರೇಷ್ಮೆ ಪರಟಿಗೆ ೨೦-೩೦ ರೂಪಾಯಿ ಆಗುತ್ತದೆ, ರೇಷ್ಮೆ ಸೀರೆಗಳು ಸಾವಿರಗಟ್ಟಲೆ ಬೆಲೆ ಬಾಳುತ್ತದೆ. ರೇಷ್ಮೆ ಬಟ್ಟೆ ಸೀರೆಗಳಿಗೆ ಹಾಕಿರತಕ್ಕ ಟಾಕ್ಸನ್ನು ವಾಪಸ್ ತೆಗೆದುಕೊಳ್ಳಬೇಕಾದರೆ ಏನು ಕಾರಣ, ಈ ಬಟ್ಟೆಯನ್ನು ಉಪಯೋಗಿಸತಕ್ಕವರು ಸಾಮಾನ್ಯ ಜನರೇ ಅಥವಾ ಯಾವ ಕಾರಣದಿಂದ ರೇಷ್ಮೆ ಬಟ್ಟೆ ಮೇಲೆ ಹಾಕಿರತಕ್ಕ ಸುಂಕವನ್ನು ತೆಗೆದಿರಿ ನಮ್ಮ ದೇಶದಲ್ಲಿ ತಯಾರಾಗತಕ್ಕ ರೇಷ್ಮೆ ಯಾರ್ನ್ ಏನಿದೆ ಅದರಲ್ಲಿ ಶೇಕಡ ೮೦ ರಷ್ಟು ಹೊರ ರಾಜ್ಯಗಳಿಗೆ ಹೋಗಿ ಅಲ್ಲಿ ಬಟ್ಟೆ ತಯಾರಾಗುತ್ತಾವೆ ಮತ್ತು ಗ್ರಾಹಕರು ಕೂಡ ಹೊರಗಡೆ ಇರತಕ್ಕವರು. ನಮ್ಮ ರಾಜ್ಯದಲ್ಲಿ ಬರೀ ರೇಷ್ಮೆ ಉತ್ಪಾದನೆ ಮಾಡತಕ್ಕ ಪರಿಸ್ಥಿತಿ ಇರುವಾಗ, ಶೇಕಡ ೮೦ ರಷ್ಟು ರೇಷ್ಮೆ ಹೊರಗಡೆ ಮಾರಾಟವಾಗುತ್ತಿರುವಾಗ ನಮ್ಮ ರಾಜ್ಯದಲ್ಲಿ ಬೊಕ್ಕಸ ತುಂಬಿಸತಕ್ಕಂಥಾದ್ದು ಅವಶ್ಯಕ. ಆದುದರಿಂದ ರೇಷ್ಮೆ ಯಾರ್ನ್‌ಮೇಲೆ ಏಕೆ ಸುಂಕವನ್ನು ಹಾಕಲಿಲ್ಲ ಎಂದು ಹೇಳುತ್ತೇನೆ.

ಇವತ್ತು ಡೆಸ್ಪರ್ಸ್, ಇನ್‌ಸೆಕ್ಟಿಸೈಡನ್ನು ಉಪಯೋಗಿಸತಕ್ಕವರು ಬಹಳ ಸಾಹುಕಾರರು ಎಂದು ನೀವು ತಿಳಿದುಕೊಂಡಿದ್ದೀರಿ. ವಾಸ್ತವ ಪರಿಸ್ಥಿತಿ ಏನೆಂದರೆ. ಡೆಸ್ಪರ್ಸ್, ಇನ್‌ಸೆಕ್ಟಿಸೈಡ್ಸ್, ಫ್ಯೂಯರ್ಸ್ ಇದಕ್ಕೆಲ್ಲಾ ಶೇಕಡ ೫೦ ರಷ್ಟು ಸಬ್‌ಸಿಡಿ ಕೊಡುತ್ತಿದ್ದರು ಅವನ್ನು ತೆಗೆದ ಕಾರಣ ಏನೆಂದರೆ, ಸರಬರಾಜು ಮಾಡತಕ್ಕ ಔಷಧಿಗಳು ಮತ್ತು ಡೆಸ್ಪರ್ಸ್ ಸ್ಪ್ರೇಯರ್ಸ್ ಇವೆಲ್ಲಾ ದೊಡ್ಡ ದೊಡ್ಡ ರೈತರಿಗೆ ಸೇರುತ್ತಾ ಮತ್ತು ದೊಡ್ಡ ದೊಡ್ಡ ಹಿತಾಸಕ್ತಿ ಇರತಕ್ಕವರಿಗೆ ಸೇರುತ್ತಾ ಇವೆ. ಮತ್ತು ಯಾರ ಕೈ ಮುಂದಾಗುತ್ತದೆ ಅಂಥವರಿಗೆ ಸೇರುತ್ತಾ ಇವೆ, ಆದುದರಿಂದ ಇದನ್ನು ಮಾತಾ ಮಾಡಿಸ್ಪೇವೆ ಎಂದು ಸರ್ಕಾರದವರು ಅನೇಕ ಸಂದರ್ಭದಲ್ಲಿ ಹೇಳಿದ್ದು ಉಂಟು. ಆದರೆ ಇಲ್ಲಿ ಅದು ಏನು ಕೆಲಸ ಮಾಡುತ್ತದೆ ಎಂದರೆ, ಇಷ್ಟಿಯವರೆಗೆ ಡಸ್ಪ್ ಅಂಡ್ ಸ್ಪ್ರೇಯರ್‌ನ್ನು ದೊಡ್ಡ ದೊಡ್ಡ ರೈತರು ಮತ್ತು ಭೂಮಾಲೀಕರು ಕೊಂಡು ಉಪಯೋಗ ಮಾಡುತ್ತಿದ್ದರು, ಇನ್ನು ಮುಂದೆ ಅದನ್ನು ಸಾಮಾನ್ಯ ರೈತರೂ ಸಹ ಉಪಯೋಗಿಸುತ್ತಾರೆ ಎಂಬುದು

ತಮ್ಮ ಒಂದು ಮಾದದ ಮೂಲಕ ಗೊತ್ತಾಗುತ್ತದೆ ಈ ರೀತಿ ಸಾಮಾನ್ಯ ರೈತರು ಉಪಯೋಗ ಮಾಡುವ ಡಸ್ಟ್ ಅಂಡ್ ಸ್ಪ್ರೆಯರ್ ಮೇಲೆ ಸುಂಕ ಹಾಕಿರುವಾಗ ರೇಷ್ಮೆ ಬಟ್ಟೆಯ ಮೇಲೆ ಹಾಕದಿರುವುದಕ್ಕೆ ಕಾರಣ ವೇನು? ಈ ಮೊದಲು ಹಾಕಿದ್ದನ್ನು ಪುನಃ ವಾಪಸ್ ತೆಗೆದು ಕೊಳ್ಳಲು ಏನು ಕಾರಣರತ್ನ? ಆ ಬಟ್ಟೆಯನ್ನು ಉಡುವವರು ಏನಿದ್ದರೂ ಶ್ರೀಮಂತರು, ಆದರೂ ಸಹ ಮೇಲಿನ ತೆರಿಗೆಯನ್ನು ಮಜಾ ಮಾಡಿದ್ದು ನೋಡಿದರೆ, ಅವರ ಒಂದು ಪ್ರಭಾವಕ್ಕೆ ಒಳಗಾಗಿ ಈ ರೀತಿ ಮಾಡಿದ್ದೀರಿ ಎಂಬುದು ಸಾಭೀತಾಗುತ್ತದೆ. ನಮ್ಮ ರಾಜ್ಯದಲ್ಲಿ ತಯಾರಾಗುವ ರೇಷ್ಮೆ ಬಟ್ಟೆಗಳ ಪೈಕಿ ಶೇಕಡ ೮೦ ರಷ್ಟು ಹೊರಗಡೆಗೆ ಹೋಗುತ್ತದೆ. ಆದನ್ನು ಉಪಯೋಗ ಮಾಡುವವರು ಹೊರ ರಾಜ್ಯಗಳಲ್ಲಿಯೇ ಹೆಚ್ಚಾಗಿದ್ದಾರೆ ಆದಕಾರಣ ಮೇಲೆ ತೆರಿಗೆ ಹಾಕಿದರೆ ಹೊರ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಆದಾಯ ಬರುತ್ತದೆ ಯಾದ ಕಾರಣ ಇದನ್ನು ಮತ್ತೊಮ್ಮೆ ಪುನರ್ ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ ಈಗ ಅದನ್ನು ತೆಗೆಯಲು ಏನು ಕಾರಣಗಳನ್ನು ಕೊಟ್ಟಿದ್ದೀರಿ, ಅದು ಸಕಾರಣವಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ, ಹ್ಯಾಂಡ್ ಲೂಮಂ ಸಿಲ್ಕಿಗೂ ಮತ್ತು ಪವರ್ ಲೂಮು ಸಿಲ್ಕಿಗೂ ವ್ಯತ್ಯಾಸವಿಲ್ಲದಿರುವ ಕಾರಣ, ಅದನ್ನು ವಿಂಗಡಣೆ ಮಾಡುವುದಕ್ಕಾಗುವುದಿಲ್ಲ, ಈ ಕಾರಣದಿಂದ ಅದರ ಮೇಲೆ ಟ್ಯಾಕ್ಸ್ ಹಾಕುವುದು ಕಷ್ಟವಾಗುತ್ತದೆಂದು ಹೇಳಿ, ಅದರ ಮೇಲೆ ತೆರಿಗೆ ಹಾಕುವುದನ್ನು ಕೈ ಬಿಟ್ಟಿದ್ದೀರಿ. ಆದರೆ ಇದನ್ನು ಉಪಯೋಗಿಸುವವರು ಒಳ್ಳೆಯ ಸ್ಥಿತಿವಂತರು, ಇಂದು ಒಂದು ಸಿಲ್ಕ್ ಸೀರೆ ಒಂದು ಸಾವಿರ ರೂಪಾಯಿಗಳವರೆಗೂ ಮಾರಾಟ ವಾಗುತ್ತಿದೆ. ಅಂದರೆ ಅದನ್ನು ಕೊಳ್ಳುವವರು ಏನಿದ್ದರೂ ಒಳ್ಳೆಯ ಸ್ಥಿತಿವಂತರು, ಅಂತಹವರು ಉಪಯೋಗ ಮಾಡುವ ಸಿಲ್ಕ್ ಬಟ್ಟೆಯ ಮೇಲೆ ತೆರಿಗೆ ಹಾಕದಿರುವುದು ಪರಮ ಅಪರಾಧ ಎಂದು ಹೇಳಬೇಕಾಗಿದೆ.

ಇನ್ನು ಆಸ್ಪಾಲ್ಟ್ ಮೇಲೆ ೮ ಪರ್ಸೆಂಟ್ ತೆರಿಗೆ ಹಾಕಿದ್ದನ್ನು ೪ ಪರ್ಸೆಂಟಿಗೆ ಇಳಿಸಿದ್ದೀರಿ ಮಾನ್ಯ ಕಿಕ್ಕೆಲ್ಲಾಯ ಅವರು ಹೇಳಿದಂತೆ ಇದಕ್ಕೆ ಕನ್ಸ್ಯೂಮರ್ ಯಾರು ಎಂದರೆ, ಕೇವಲ ಸರ್ಕಾರ, ಸರ್ಕಾರದವರೇ ಕೊಂಡುಕೊಳ್ಳುವ ವಸ್ತುವಿನ ಮೇಲೆ ಸರ್ಕಾರದವರೇ ಟ್ಯಾಕ್ಸ್ ಹಾಕಿರುವುದು ಸರಿಯೇ? ಇದನ್ನು ಬೇರೆ ಯಾರೂ ಉಪಯೋಗ ಮಾಡುವ ಸ್ಥಿತಿಯಲ್ಲಿ ಇಲ್ಲ, ಆದಕಾರಣ ಇದರ ಮೇಲಿನ ಟ್ಯಾಕ್ಸ್‌ನ್ನು ಸಂಪೂರ್ಣವಾಗಿ ಮಜಾ ಮಾಡಿದರೆ ಕ್ಲರಿಕಲ್ ಜಾಬು ಕಡಿಮೆಯಾಗುತ್ತದೆ, ಆದಕಾರಣ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ನಾನು ಬಜೆಟ್ ಮೇಲೆ ಮಾತನಾಡುವಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅದು ಏನೆಂದರೆ, ಕೋಲಾರದಲ್ಲಿರತಕ್ಕಂಥ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯಲ್ಲಿ ಒಬ್ಬರು ಗುಮಾಸ್ತರು ಇದ್ದರು. ಅವರನ್ನು ಚಿಂತಾಮಣಿಗೆ ವರ್ಗ ಮಾಡಿದರು, ಅಲ್ಲಿ ಯಾವುದೋ ತಪ್ಪಿಗೆ ಅವರನ್ನು ಮತ್ತು ಎ.ಸಿ.ಟಿ.ಒ. ಅವರನ್ನು ವಿಜಿಲೆನ್ಸ್ ಕಮಿಷನರ್ ಅವರು ಹಿಡಿದರು, ನಂತರ ಆ ಕೇಸ್ ಮುಂದೆ ನಡೆಯದಂತೆ ಯಾರು ಯಾರಿಗೆ ಏನು ಏನು ಮಾಡಬೇಕೋ ಅದನ್ನೆಲ್ಲಾ ಮಾಡಿದರು ನಂತರ ಅವರು ಮಾಡಿದ ತಪ್ಪಿಗೆ ಏನು ಶಿಕ್ಷೆ ಕೊಟ್ಟರು ಎಂದರೆ, ಅವರಿಗೆ ಮುಂದಿನ ಬಡ್ತಿ ಕೊಟ್ಟು ಮತ್ತೆ ಕೋಲಾರಕ್ಕೆ ವರ್ಗ ಮಾಡಿದರು, ಈ ವಿಷಯ ಕೆಲವು ಪತ್ರಿಕೆಗಳಲ್ಲಿ ತಪ್ಪಾಗಿ ವರದಿಯಾಗಿದೆ ಅದು ಗೊಂದಲಕ್ಕೆ ಕಾರಣವಾಗಿತ್ತು, ಏನೆಂದರೆ, ಈ ಗುಮಾಸ್ತರನ್ನು ಮತ್ತು ಕೋಲಾರದಲ್ಲಿರತಕ್ಕಂಥ ಎ.ಸಿ.ಟಿ.ಒ. ಅವರನ್ನು ವಿಜಿಲೆನ್ಸ್‌ನವರು ಹಿಡಿದರು ಎಂದು ವರದಿಯಾಗಿತ್ತು, ಆದರೆ ಅವರು ಕೋಲಾರದವರಲ್ಲ, ಚಿಂತಾಮಣಿಯವರು.

ಉಪಾಧ್ಯಕ್ಷರು.—ಆ ವಿಷಯವೆಲ್ಲಾ ಇದರಲ್ಲಿ ಬರುವುದಿಲ್ಲ,

ಶ್ರೀ ಸಿ. ಬೈರೇಗೌಡ.—ಇಲ್ಲಿಯವರೆಗೆ ನಾನು ಏನೇನು ಸಲಹೆಗಳನ್ನು ಕೊಟ್ಟಿದ್ದೇನೆ ಅದನೆಲ್ಲಾ ಮಾನ್ಯ ಮಂತ್ರಿಗಳು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿ ಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ (ಪಣಕಾಸಿನ ಮತ್ತು ವಸತಿ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಸೇಲ್ಸ್ ಟ್ಯಾಕ್ಸ್ ಬಿಲ್‌ನ್ನು ಇಲ್ಲಿ ಮಂಡಿಸುವಾಗ, ಅದರಲ್ಲಿರತಕ್ಕಂಥ ಮುಖ್ಯವಾದ ಅಂಶಗಳ ಬಗ್ಗೆ ನಾನು ಸಂಕಷ್ಟ ಪ್ರಸ್ತಾಪ ಮಾಡಿದ್ದೇನೆ. ಮತ್ತು ಈ ಮೊದಲು ಬಜೆಟ್ ಮೇಲೆ ಇಲ್ಲಿ ಚರ್ಚೆಯಾಗುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಏನು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟರು, ಆ ಸಲಹೆಗಳನ್ನು ಸಹ ಸಾಧ್ಯವಾದಮಟ್ಟಿಗೆ ಗಮನಿಸಿ, ಆದರಂತೆ ನಮ್ಮ ಕಾನೂನಿನಲ್ಲಿ ಎಷ್ಟರಮಟ್ಟಿಗೆ ಮಾರ್ಪಾಡುಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಿ, ಅದರಂತೆ ಮಾಡಲು ನಾವು ಸರ್ವ ಪ್ರಯತ್ನವನ್ನೂ ಮಾಡಿದ್ದೇವೆ. ಪುನಃ ಈ ಬಿಲ್ ಇಲ್ಲಿ ಬಂದ ಸಂದರ್ಭದಲ್ಲಿ ಬಹಳಮಟ್ಟಿಗೆ ಅದೇ ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಅದರಲ್ಲಿಯೂ ಮುಖ್ಯವಾಗಿ ಮಾನ್ಯ

ಶಾಮಣ್ಣನವರು ಈ ಹತ್ತು ಪರ್ಸೆಂಟ್ ಅಡಿಷನಲ್ ಟ್ಯಾಕ್ಸ್ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡಿ, ಅದರ ಬಗ್ಗೆ ಬಹಳ ಕಾಲ ಮಾತನಾಡಿದರು. ಅವರು ಹೇಳಿರತಕ್ಕಂಥ ವಿಷಯಗಳ ಬಗ್ಗೆ ನಾನು ಸಂಕ್ಷಿಪ್ತವಾಗಿ ಯಾದರೂ ಉತ್ತರ ಹೇಳಬೇಕಾಗಿದೆ ಈ ಹತ್ತು ಪರ್ಸೆಂಟ್ ಅಡಿಷನಲ್‌ಟ್ಯಾಕ್ಸ್ ಡಿಸ್‌ಕ್ರಿಮಿನೇಟರಿಯಾಗಿದೆ ಎಂದುಅವರು ಹೇಳಿದರು. ಅವರು ಹೇಳಿದ ವಿಚಾರಗಳನ್ನು ನಾನು ಗಮನವಿಟ್ಟು ಕೇಳಿದೆ ಅವರು ಕೆಲವು ಉದಾಹರಣೆಗಳನ್ನು ಸಹ ಕೊಟ್ಟರು. ಈಗ ಫುಡ್ ಮೇಲೆ ಒಂದೂವರೆ ಪರ್ಸೆಂಟ್ ಟ್ಯಾಕ್ಸ್ ಇದೆ ; ಅದರ ಮೇಲೆ ಹತ್ತು ಪರ್ಸೆಂಟ್ ಅಡಿಷನಲ್ ಟ್ಯಾಕ್ಸ್ ಎಂದರೆ ಅಷ್ಟೊಂದು ಭಾರ ಬೀಳುವುದಿಲ್ಲ : ಆದರೆ ಬೇರೆ ವಸ್ತ್ರಗಳ ಮೇಲೆ ಈಗ ೧೦ ರಿಂದ ೧೬ ಪರ್ಸೆಂಟ್‌ವರೆಗೆ ಟ್ಯಾಕ್ಸ್ ಏನಿದೆ, ಅದರ ಮೇಲೆ ಹತ್ತು ಪರ್ಸೆಂಟ್ ಅಡಿಷನಲ್ ಟ್ಯಾಕ್ಸ್ ಮತ್ತೆ ಹಾಕಿದರೆ ಜಾಸ್ತಿಯಾಗುವುದಿಲ್ಲವೇ ಮತ್ತು ಇದು ಡಿಸ್‌ಕ್ರಿಮಿನೇಟರಿ ಆಗುವುದಿಲ್ಲವೇ ಎಂದು ಅವರು ಕೇಳಿದರು : ಆದರೆ ಅದು ಖಂಡಿತವಾಗಿ ಡಿಸ್‌ಕ್ರಿಮಿನೇಟರಿಯಾಗುವುದಿಲ್ಲ: ಈಗ ಫುಡ್ ಮೇಲೆ ಒಂದೂವರೆ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೇವೆ ಸಾಮಾನ್ಯ ಜನರು ಉಪಯೋಗ ಮಾಡುವ ಆಹಾರಪದಾರ್ಥಗಳ ಮೇಲೆ ಜಾಸ್ತಿ ಟ್ಯಾಕ್ಸ್ ಹಾಕಬಾರದೆಂದು ಒಂದೂವರೆ ಪರ್ಸೆಂಟ್ ಮಾತ್ರ ಹಾಕಿದ್ದೇವೆ ಸಾಮಾನ್ಯ ಜನರು ಉಪಯೋಗ ಮಾಡುವ ಪದಾರ್ಥಗಳು ಎಂವೆ, ಮತ್ತು ಆ ಪದಾರ್ಥಗಳ ಅವಶ್ಯಕತೆ ಎಷ್ಟಿದೆ ಎಂಬುದನ್ನು ನೋಡಿಕೊಂಡು ಈ ಬೇಸಿಕ್ ಟ್ಯಾಕ್ಸ್‌ನ್ನು ನಾವು ಹಾಕಿರುವುದು ; ಈಗ ಅದರ ಮೇಲೆ ಹತ್ತು ಪರ್ಸೆಂಟ್ ಅಡಿಷನಲ್ ಟ್ಯಾಕ್ಸ್ ಹಾಕಿದರೆ, ಬೇಸಿಕ್ ಟ್ಯಾಕ್ಸ್‌ನಲ್ಲಿರತಕ್ಕಂಥ ಹಣಕಾಸಿನ ಧೋರಣೆ, ಸಾಮಾಜಿಕ ನ್ಯಾಯದ ಧೋರಣೆ ಇದರ ಮೇಲೆ ಅವಲಂಬಿಸುತ್ತದೆ. ಆದಕಾರಣ ಇಲ್ಲಿ ಯಾವ ರೀತಿಯ ಡಿಸ ಕ್ರಿಮಿನೇಟರಿ ಖಂಡಿತವಾಗಿ ಆಗುವುದಿಲ್ಲವೆಂದು ಹೇಳುತ್ತೇನೆ ಇಲ್ಲಿ ಹತ್ತು ಪರ್ಸೆಂಟ್ ಅಡಿಷನಲ್ ಟ್ಯಾಕ್ಸ್ ಹಾಕುವುದು ಎಂದರೆ, ಯಾರು ವರ್ಷಕ್ಕೆ ಹತ್ತು ಲಕ್ಷ ರೂಪಾಯಿ ಅಥವಾ ಅದಕ್ಕೂ ಹೆಚ್ಚಿನ ವ್ಯವಹಾರ ನಡೆಸುತ್ತಾರೆ, ಅಂತಹವರ ಮೇಲೆ ಇದು ಬೀಳುತ್ತದೆ. ಇದು ನಮ್ಮ ರಾಜ್ಯದಲ್ಲಿ ತೆರಿಗೆ ಕೊಡುವಂತಹವರು ಸುಮಾರು ೬೦-೭೦ ಸಾವಿರ ಜನರು ಇದ್ದಾರೆ. ಇವರುಗಳ ಪೈಕಿ ಕೇವಲ ೫ ಸಾವಿರ ಜನರಿಗೆ ಮಾತ್ರ ಇದು ಅನ್ವಯವಾಗುತ್ತದೆ ಬೇರೆಯವರಿಗೆ ಇದು ಅನ್ವಯವಾಗುವುದಿಲ್ಲ. ಇಂತಹ ಟ್ಯಾಕ್ಸ್ ತಮಿಳುನಾಡಿನಲ್ಲಿಯೂ ಇದೆ. ಅಲ್ಲಿ ಇದನ್ನು ಹಾಕಿದಾಗ, ಅದು ಕೋರ್ಟಿಗೆ ಸಹ ಹೋಗಿ ಟೆಸ್ಟ್ ಆಯಿತು ; ತಂತರ ಅಲ್ಲಿ ಇದು ಡಿಸ್‌ಕ್ರಿಮಿನೇಟರಿ ಅಲ್ಲ ಎಂದು ಖಚಿತವಾಗಿ ತಿಳಿದುಬಂತು. ಆದಕಾರಣ ಮಾನ್ಯ ಸದಸ್ಯರು ಈ ಬಗ್ಗೆ ಭಯಪಡಬೇಕಾಗಿಲ್ಲ ಎಂದು ಹೇಳುತ್ತೇನೆ.

1-00 P. M.

ಮತ್ತೆ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಟರ್ನ್‌ಓವರ್ ಮೇಲೆ ಅವಲಂಬಿಸಿರತಕ್ಕ ಟ್ಯಾಕ್ಸ್ ಅನ್ನು ಹಾಕಿದ್ದಾರೆ. ೧೦ ರೂಪಾಯಿಗಳಿಗಿಂತ ಹೆಚ್ಚು ಟರ್ನ್‌ಓವರ್ ಆಗಿದ್ದರೆ ಅಂಥವುಗಳಿಗೆ ಶೇಕಡ ೧೦ ರಷ್ಟು ಹೆಚ್ಚು ಸೇಲ್ಸ್ ಟ್ಯಾಕ್ಸ್ ವಿಧಿಸಲಾಗಿದೆ. ಇದು ೫ ಸಾವಿರ ಜನಗಳಿಗೆ ಮಾತ್ರ ಅನ್ವಯಿಸುತ್ತದೆ. ಇದರಲ್ಲಿ ಅಂಥಾ ತೊಂದರೆಯೇನೂ ಇರುವುದಿಲ್ಲ. ಇದರಲ್ಲಿ ಮಾರ್ಜಿನಲ್ ಕೇಸ್ ಅಷ್ಟೇ ಇರುವುದಿಲ್ಲ. ಟರ್ನ್‌ಓವರ್ ಸ್ಲಿಟ್ ಮಾಡುವ ದೃಷ್ಟಿಯಿಂದ ಬೇರೆ ಫರ್ಮ್ ಮಾಡಿದ್ದಾರೆ, ಇದರಿಂದ ಟ್ಯಾಕ್ಸ್ ಇವೇಜನ್ ಆಗುತ್ತದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಯಾವ ಟ್ಯಾಕ್ಸ್ ಹಾಕಿದರೂ ಕೂಡ ಲೋಕಲ್ ಟ್ಯಾಕ್ಸ್ ಇವೇಜನ್ ಸ್ವಲ್ಪ ಇದ್ದೇ ಇರುತ್ತದೆ. ಈಗ ೫ ಸಾವಿರ ಜನಗಳು ಈ ಒಂದು ಟ್ಯಾಕ್ಸಿಗೆ ಒಳಪಟ್ಟಿದ್ದಾರೆ. ಆದ್ದರಿಂದ ಬೇರೆ ಫರ್ಮ್ ಮಾಡಿ ಟ್ಯಾಕ್ಸ್ ಇವೇಜನ್ ಮಾಡಿದ್ದಾರೆ ಎಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಮಾರ್ಜಿನಲ್ ಕೇಸಿನಲ್ಲಿ ಆಗಬಹುದು. ಆದರೆ ಎಷ್ಟೋ ಫರ್ಮ್‌ಗಳಲ್ಲಿಲ್ಲಿ ಮಾರ್ಜಿನಲ್ ಕೇಸು ಇಲ್ಲ. ೧೦ ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಟರ್ನ್ ಓವರ್ ಇರುವ ಫರ್ಮ್‌ಗಳಲ್ಲಿಲ್ಲಿ ಅರ್ಧ ಫರ್ಮ್‌ಗಳು ಬೆಂಗಳೂರಿನಲ್ಲಿ ಇವೆ. ೧೦ ಪರ್ಸೆಂಟ್ ಟ್ಯಾಕ್ಸ್ ತಪ್ಪಿಸುವ ದೃಷ್ಟಿಯಿಂದ ೧೦-೨೦ ಫರ್ಮ್‌ಗಳನ್ನು ಮಾಡುವ ಒಂದು ಹವ್ಯಾಸಕ್ಕೆ ಹೋಗುವುದಿಲ್ಲ ಎಂದು ನಾನು ಹೇಳುತ್ತೇನೆ ಮಾರ್ಜಿನಲ್ ಫರ್ಮ್ ಒಂದೆರಡು ಕಡೆ ಆಗಬಹುದು. ಯಾವುದೇ ಟ್ಯಾಕ್ಸ್ ಕೊಟ್ಟರೂ ಕೂಡ ಬಿಜಿನೆಸ್ ಎಕ್ಸ್‌ಪೆಂಡಿಚರ್ ಎಂದು ಪರಿಗಣಿಸುತ್ತಾರೆ. ಬಿಜಿನೆಸ್ ಎಕ್ಸ್‌ಪೆಂಡಿಚರ್ ಅನ್ನು ಇನ್‌ಕಂಟ್ಯಾಕ್ಸ್ ಲೆಕ್ಕದಲ್ಲಿಲ್ಲಿ ಡಿಡಕ್ಷನ್ ಕೊಟ್ಟೇ ಕೊಡುತ್ತಾರೆ ಟರ್ನ್‌ಓವರ್ ಟ್ಯಾಕ್ಸ್ ಕೊಡಬೇಕಾದರೆ ಅದು ರಿಜ್ಯಾಟೆಡ್ ಆಗಿರುತ್ತದೆ. ಟರ್ನ್‌ಓವರ್ ೧೦ ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಇರುವುದರಿಂದ ಲೆಕ್ಕ ಇಡುವ ವ್ಯವಸ್ಥೆ ಅವರಿಗೆ ಇರುವುದರಿಂದ ಅದನ್ನು ರಿಪ್ಯೂಟೆಡ್ ಫರ್ಮ್ ಎಂದು ಇಟ್ಟುಕೊಳ್ಳಬೇಕಾಗುತ್ತದೆ. ಡೈವರ್ಸನ್ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದರು ೧೦ ಪರ್ಸೆಂಟ್ ಟ್ಯಾಕ್ಸಿನಿಂದ ಅಷ್ಟೊಂದು ಡೈವರ್ಷನ್ ಆಗುವುದಕ್ಕೆ ಆಸ್ಪದ ಇಲ್ಲ ಎಂದು ನನ್ನ ಸ್ಪಷ್ಟವಾದ ವಿಚಾರ ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡಬೇಕಾದರೆ ಒಂದು ಸಾವಿರ ರೂಪಾಯಿ ಟ್ಯಾಕ್ಸ್ ಕೊಡುವವರು ಇದ್ದರೆ ೧೦ ಪರ್ಸೆಂಟ್‌ನಂತೆ ೧೦೦ ರೂಪಾಯಿಗಳನ್ನು ಕೊಡ

ಬೇಕಾಗುತ್ತದೆ. ಆದ್ದರಿಂದ ಈ ತೆರಿಗೆಯನ್ನು ಹಾಕಿರುವುದರಿಂದ ಟ್ಯಾಕ್ಸ್ ಡೈವರ್ಷನ್ ಆಗುತ್ತದೆ ಎನ್ನುವ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಬೇರೆ ರಾಜ್ಯಗಳಲ್ಲಿಯೂ ಕೂಡ ಎಂದರೆ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಈ ಟ್ಯಾಕ್ಸ್ ಇರುವುದರಿಂದ ಡೈವರ್ಷನ್ ಆಗುವುದಕ್ಕೆ ಅವಕಾಶ ಇಲ್ಲ. ಇದರಲ್ಲಿ ಯಾರಿಗೂ ಲಾಸ್ ಇಲ್ಲ. ಯಾರು ಬಿಜಿನಸ್ ಮಾಡುತ್ತಾರೆ ಅವರು ಟ್ಯಾಕ್ಸ್ ಕೊಡುತ್ತಾರೆ. ಇದು ಲಾಭದಾಯಕ ಆಲ್ಲದೆ ಹೋಗಿದ್ದರೆ ಯಾರೂ ಕೂಡ ಬಿಜಿನೆಸ್ ಮಾಡುವ ಕೆಲಸಕ್ಕೆ ಹೋಗುತ್ತಾ ಇರಲಿಲ್ಲ. ಆದ್ದರಿಂದ ಇದಕ್ಕಿಂತ ಹೆಚ್ಚು ಉತ್ತರ ಹೇಳಬೇಕಾಗಿಲ್ಲ.

ಮಾನ್ಯ ಸದಸ್ಯರು ಫುಡ್‌ಗ್ರೈನ್ ಟ್ಯಾಕ್ಸ್ ಬಗ್ಗೆ ಹೇಳಿದರು. ಫುಡ್ ಗ್ರೈನ್ಸ್ ಮೇಲೆ ಸೇಲ್ಸ್ ಟ್ಯಾಕ್ಸ್ ಅನ್ನು ಸಿಂಗಲ್ ಪಾಯಿಂಟ್ ಮಾಡಬೇಕು ಎಂದು ಹೇಳಿದರು. ಈಗ ಮಲ್ಟಿಪಾಯಿಂಟ್ ಇರುವುದನ್ನು ಸಿಂಗಲ್ ಪಾಯಿಂಟ್ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡೋಣ. ಈಗ ಅದರ ಬಗ್ಗೆ ಪ್ರಾಸ್ತಾಪ ಮಾಡುವುದು ಬೇಡ ಅಡ್ವೈಜರಿ ಕಮಿಟಿಯಲ್ಲಿರತಕ್ಕ ಸದಸ್ಯರ ಅಭಿಪ್ರಾಯ ಮಲ್ಟಿ ಪಾಯಿಂಟ್ ತೆರಿಗೆ ಹಾಕಬೇಕೆಂದು ವಾತಾವರಣ ಇದೆ. ಆದ್ದರಿಂದ ಅದನ್ನು ಸಿಂಗಲ್ ಪಾಯಿಂಟ್ ಮಾಡುವುದಕ್ಕೆ ಸಾಧ್ಯ ಇದ್ದರೆ ಆ ಬಗ್ಗೆ ಅಡ್ವೈಜರಿ ಕಮಿಟಿಯವರು ಅಭಿಪ್ರಾಯ ಕೊಡುವುದಾದರೆ ಅದನ್ನು ಯೋಚನೆ ಮಾಡೋಣ. ಆದ್ದರಿಂದ ಈಗ ಆ ವಿಚಾರಕ್ಕೂ ಈ ವಿಚಾರಕ್ಕೂ ಸಂಬಂಧ ಇಲ್ಲ.

ರೆಡಿಮೇಡ್ ಗಾರ್ಮೆಂಟ್ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿ ಈ ಟ್ಯಾಕ್ಸನ್ನು ನಾವು ಹಾಕಿದ್ದೇವೆ. ಇದರ ಮೇಲೆ ೪ ಪರ್ಸೆಂಟ್ ಟ್ಯಾಕ್ಸ್ ಹಾಕಿದರೆ ಬಹಳ ತೊಂದರೆಯಾಗುತ್ತದೆ. ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಕೂಡ ೪ ಪರ್ಸೆಂಟ್ ಇದೆ. ಆದ್ದರಿಂದ ಅದಕ್ಕಿಂತ ಕಡಿಮೆ ಇರಬೇಕು. ಬೇರೆ ರಾಜ್ಯಗಳವರೂ ಸಾಕಷ್ಟು ಟ್ಯಾಕ್ಸ್ ಹಾಕಿದ್ದಾರೆ. ನಾವು ಬೇರೆ ಕಡೆ ರೆಡಿಮೇಡ್ ಗಾರ್ಮೆಂಟ್ ಕಳುಹಿಸಬೇಕಾದರೆ ಹಲವಾರು ದೃಷ್ಟಿಯಿಂದ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಎಷ್ಟು ಇದೆ ಅದಕ್ಕಿಂತ ಕಡಿಮೆ ಇದ್ದರೆ ಒಳ್ಳೆಯದು ಎಂದು ಹೇಳಿದರು. ಅವರ ಒಂದು ಅಭಿಪ್ರಾಯಕ್ಕೆ ಬೆಲೆ ಕೊಟ್ಟು ರೆಡಿಮೇಡ್ ಗಾರ್ಮೆಂಟ್ ಟ್ಯಾಕ್ಸ್ ೪ ಪರ್ಸೆಂಟ್ ಇದ್ದದ್ದನ್ನು ೩ ಪರ್ಸೆಂಟ್ ಮಾಡಿದ್ದೇವೆ. ಈ ಒಂದು ತೀರ್ಮಾನದಿಂದ ಎಲ್ಲಾ ಜನಗಳಿಗೂ ಸಂಪೂರ್ಣವಾಗಿ ಸಮಾಧಾನವಾಗಿದೆ ಎಂದು ತಿಳಿದುಕೊಂಡಿದ್ದೇನೆ.

ಅರೆಕಾನಟ್ ಏನಿದೆ ಅದು ನಮ್ಮ ಕರ್ನಾಟಕದಲ್ಲಿ ಬಹಳ ಮುಖ್ಯವಾದ ಪದಾರ್ಥ. ವ್ಯವಸಾಯಗಾರರ ದೃಷ್ಟಿಯಿಂದ ವ್ಯಾಪಾರಸ್ಥರ ದೃಷ್ಟಿಯಿಂದ ಕೂಡ ಇದು ಬಹಳ ಮುಖ್ಯವಾದದ್ದು. ಇದರ ಬಗ್ಗೆ ಕೌನ್ಸಿಲ್‌ನಲ್ಲಿ ಚರ್ಚೆ ಬಂದಾಗ ಕೂಡ ನಾನು ಹೇಳಿದ್ದೇನೆ. ತಕ್ಷಣ ಇದಕ್ಕೆ ಒಂದು ಸ್ಟಡಿ ಗ್ರೂಪ್ ನೇಮಕ ಮಾಡಿ ಇದರ ಬಗ್ಗೆ ಎಷ್ಟು ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಮಾಡಿ ನಿಜವಾಗಿ ಈ ತೆರಿಗೆಯಿಂದ ತೊಂದರೆಯಾಗುತ್ತದೆ ಮತ್ತು ಈ ತೆರಿಗೆಯನ್ನು ಕಡಿಮೆ ಮಾಡಬೇಕು ಎಂದು ಸರ್ಕಾರಕ್ಕೆ ಮನದಟ್ಟಾದಾಗ ಮಾತ್ರ ಇದನ್ನು ಸ್ವಲ್ಪ ಕಡಿಮೆ ಮಾಡಿದ್ದೇವೆ. ರೆಡಿಮೇಡ್ ಗಾರ್ಮೆಂಟ್ ಮತ್ತು ಅರೆಕಾನಟ್ ಇವುಗಳಿಗೆ ತೆರಿಗೆಯನ್ನು ಕಡಿಮೆ ಮಾಡಿರುವುದನ್ನ ಮಾನ್ಯ ಸದಸ್ಯರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಮಾನ್ಯ ಸದಸ್ಯರು ಶಭಾಶ್‌ಗಿರಿಯನ್ನು ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ನಾವು ಯಾವ ಇನ್‌ಫ್ಲುಯೆನ್ಸ್‌ಗೂ ಒಳಗಾಗಿಲ್ಲ. ಅರೆಕ ಪಟ್ ಟ್ಯಾಕ್ಸ್ ಅನ್ನು ೪ ಪರ್ಸೆಂಟಿನಿಂದ ಮೂರೂವರೆ ಪರ್ಸೆಂಟ್‌ಗೆ ಮಾಡಿದ್ದೇವೆ.

